بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 05

# ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 41

ವಾರ್ಷಿಕ ಶುಲ್ಕ ರೂ.600/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

10 ಅಕ್ಟೋಬರ್ 2024, 10 ಅಖಾ 1403 ಹಿಜರಿ ಶಮ್‌ಸಿ,
06 ರಬೀಉಸ್ಸಾನಿ 1445 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಸರ್ವಶಕ್ತನಾದ ಅಲ್ಲಾಹನು ಹುಝೂರ್ ಅವರಿಗೆ ದೀರ್ಘ ಮತ್ತು ಸಕ್ರಿಯ ಜೀವನವನ್ನು ನೀಡಲಿ ಮತ್ತು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ۔

## ಅಲ್ಲಾಹನ ಉಪದೇಶ

وَلَا تَقُوْلَنَّ لِشَايْءٍ
اِنِّيْ فَاعِلٌ ذٰلِكَ غَدًا
اِلَّآ اَنْ يَّشَآءَ اللّٰهُ

**(ಅಲ್ ಕಹಫ್: 24,25)**

**ಅಂದರೆ: ಖಂಡಿತವಾಗಿಯೂ ನಾನು ನಾಳೆ ಅದನ್ನು ಮಾಡುವೆನು ಎಂದು ನೀನು ಯಾವ ಕಾರ್ಯದ ಬಗ್ಗೆಯೂ ಹೇಳಬೇಡಿ. ಅಲ್ಲಾಹನು ಇಚ್ಛಿಸಿದರೆ ಎಂದು ಸೇರಿಸಿ ಹೇಳುವುದುರ ಹೊರತು.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ನಿಮ್ಮ ಪೈಕಿ ಆಡಳಿತ ಹೊಂದಿರುವ ಪ್ರತಿಯೊಬ್ಬ ಆಡಳಿತಗಾರನು ತನ್ನ ಪ್ರಜೆಯ ಬಗ್ಗೆ ಪ್ರಶ್ನಿಸಲಾಗುವನು.

**(2409)** ಹಝ್‌ರತ್ ಅಬ್ದುಲ್ಲಾ ಬಿನ್ ಉಮರ್(ರ) ವರದಿ ಮಾಡುತ್ತಾರೆ, ರಸೂಲುಲ್ಲಾಹ್(ಸ) ನುಡಿಯುತ್ತಾರೆ: ನಿಮ್ಮ ಪೈಕಿ ಆಡಳಿತ ಹೊಂದಿರುವ ಪ್ರತಿಯೊಬ್ಬ ಆಡಳಿತಗಾರನಲ್ಲಿ ತನ್ನ ಪ್ರಜೆಗಳ ಬಗ್ಗೆ ಪ್ರಶ್ನಿಸಲಾಗುವುದು. ರಾಜನಾದವನು ಆಡಳಿತ ಹೊಂದಿರುತ್ತಾನೆ. ಆದುದರಿಂದ ಅವನು ಪ್ರಜೆಗಳ ಬಗ್ಗೆ ಪ್ರಶ್ನಿಸಲ್ಪಡುವವನು. ಅಂತೆಯೇ ಪ್ರತಿಯೊಬ್ಬ ಮನುಷ್ಯನು ತನ್ನ ಮನೆಯ ಯಜಮಾನ ಆಡಳಿತಗಾರನಾಗಿರುತ್ತಾನೆ. ಆದುದರಿಂದ ಅವನಿಂದಲೂ ಅವನ ಪ್ರಜೆ (ಕುಟುಂಬ)ದ ಬಗ್ಗೆ ಪ್ರಶ್ನಿಸಲ್ಪಡುವವನು. ಮಹಿಳೆಯೂ ಸಹ ತನ್ನ ಪತಿಯ ಮನೆಯಲ್ಲಿ ಆಡಳಿತ ಹೊಂದಿರುತ್ತಾಳೆ. ಆದುದರಿಂದ ಅವಳಿಂದಲೂ ಅವಳ ಪ್ರಜೆ (ಕುಟುಬ)ದ ಬಗ್ಗೆ ಪ್ರಶ್ನಿಸಲ್ಪಡುವವಳು. ಮನೆಯ ಸೇವಕನು (ನೌಕರನು) ಸಹ ಸಂಪತ್ತಿನ ರಕ್ಷಣೆಗೊಸ್ಕರ ಜವಾಬ್ಧಾರನಾಗಿರುತ್ತಾನೆ. ಅವನೂ ಸಹ ಈ ಪೈಕಿ ಪ್ರಶ್ನಿಸಲ್ಪಡುವವನು. (ಹಝ್‌ರತ್ ಇಬ್ನು ಉಮರ್(ರ) ಹೇಳಿದರು. ನಾನು ರಸೂಲುಲ್ಲಾಹ್(ಸ) ಅವರಿಂದ ಇವೆಲ್ಲ ಜನರ ಪೈಕಿ ಆಲಿಸಿರುತ್ತೇನೆ. ಮತ್ತು ನನ್ನ ಭಾವನೆಯಾಗಿದೆ. ನಬಿ(ಸ) ಹೀಗೂ ನುಡಿದಿದ್ದರು. ಮನುಷ್ಯನು ತನ್ನ ತಂದೆಯ ಸಂಪತ್ತಿಗೂ ಜವಾಬ್ಧಾರನಾಗಿದ್ದಾನೆ. ಅವನೂ ಸಹ ಎಂದರೆ ಆ ಸಂಪತ್ತಿನ ಪೈಕಿ ಪ್ರಶ್ನಿಸಲ್ಪಡುವವನು. ಆದುದರಿಂದ ನಿಮ್ಮ ಪೈಕಿ ಪ್ರತಿಯೊಬ್ಬನು ಜವಾಬ್ಧಾರನಾಗಿದ್ದಾನೆ. ಅವನು ತಮ್ಮ ಪ್ರಜೆ (ಸಂಪತ್ತಿನ ರಕ್ಷಣ)ಗಳ ಕುರಿತು ಪ್ರಶ್ನಿಸಲ್ಪಡುವವನು. **(ಸಹೀಹ್ ಬುಖಾರಿ, ಸಂಪುಟ–4, ಕಿತಾಬುಲ್ ಇಸ್ತಿಗ್‌ರಾಝ್, 2008 ಖಾದಿಯಾನ್)**

**'ಬದರ್' ವಾರಪತ್ರಿಕೆಯನ್ನು Online ಮುಖಾಂತರ ಓದಲು ಸಂಪರ್ಕಿಸಿ ನಮ್ಮ ವೆಬ್‌ಸೈಟ್: https://akhbarbadr.in/Kannada/#gsc.tab=0**

## ಒಬ್ಬ ವ್ಯಕ್ತಿಯು ಇಹಲೋಕವನ್ನು ತೊರೆಯುವ ಮೊದಲು, ಅವನು ದೇವರೊಂದಿಗೆ ಸಂಧಾನ ಮಾಡಿಕೊಳ್ಳಬೇಕು

## ಮನುಷ್ಯ ನೈತಿಕತೆಯನ್ನು ಸಂಪಾದಿಸುವುದು ಮತ್ತು ತಖ್ವವನ್ನು (ಧರ್ಮನಿಷ್ಠೆಯನ್ನು) ಸಂಪಾದಿಸುವುದು ದೊಡ್ಡ ವಿಷಯವಾಗಿದೆ

**ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

ವಿರೋಧಿಗಳನ್ನು ಜಯಿಸಲು ತಖ್ವಾ (ಧರ್ಮನಿಷ್ಠೆ) ಅತ್ಯಗತ್ಯವಾಗಿದೆ ಮತ್ತು ಅದಕ್ಕಾಗಿ ಪ್ರಸ್ತುತ ಕಾಲದಲ್ಲಿ ಇದನ್ನು ಗಳಿಸಲು ಉತ್ತಮ ಮಾರ್ಗವೆಂದರೆ ನಮ್ಮೊಂದಿಗೆ ಉಳಿಯುವುದು ಎಂದು ನೆನಪಿಡಿ. ಮೊದಲನೆಯದಾಗಿ, ಮೌಲ್ವಿ ನೂರುದ್ದೀನ್ ಸಾಹೇಬರು ಈ ರಹಸ್ಯವನ್ನು ಅರ್ಥಮಾಡಿಕೊಂಡಿದ್ದಾರೆ ಮತ್ತು ಅವರು ದೇವರ ಸಂತೃಪ್ತಿಗಳಿಸುವುದಕ್ಕಾಗಿ ಮತ್ತು ಧರ್ಮವನ್ನು ಪಡೆಯಲು ಇಲ್ಲಿ ಕಾಡಿನಲ್ಲಿ ಬಂದು ಕುಳಿತಿದ್ದಾರೆ. ಅವರು ಬಹಳ ದೊಡ್ಡ ತ್ಯಾಗ ಮಾಡಿದ್ದಾರೆ. ತಮ್ಮ ಆಸ್ತಿ ಮತ್ತು ಸಂಪತ್ತನ್ನು ತ್ಯಜಿಸಿ ಅರಣ್ಯ ವಾಸವನ್ನು ಪಡೆದರು. ಮೌಲ್ವಿ ಸಾಹಿಬ್ ಅವರ ಅರ್ಹತೆ ಮತ್ತು ಸಾಮರ್ಥ್ಯ ಹೊಂದಿರುವ ಯಾರಾದರು ಲಾಹೋರ್ ಅಥವಾ ಅಮೃತಸರದಲ್ಲಿ ವಾಸಿಸುತ್ತಿದ್ದರೆ ಅವರು ಹೆಚ್ಚಿನ ಪ್ರಾಪಂಚಿಕ ಪ್ರಯೋಜನಗಳನ್ನು ಪಡೆಯುತ್ತಿದ್ದರು ಎಂದು ನಾನು ಖಚಿತವಾಗಿ ಹೇಳಬಲ್ಲೆ, ಮತ್ತು ಲಾಹೋರ್ ಮತ್ತು ಅಮೃತಸರದ ಜನರು ಅವರು ಇಲ್ಲಿಗೆ ಬಂದು ವಾಸಿಸಬೇಕೆಂದು ಬಯಸಿದ್ದರು, ಆದರೆ ಅವರು ಅವರು ಎಂದಿಗೂ ಇಲ್ಲಿ ವಾಸಿಸುವುದಕ್ಕಿಂತ ಬೇರೆ ಸ್ಥಳದ ಆದಾಯ ಮತ್ತು ಪ್ರಯೋಜನಗಳಿಗೆ ಆದ್ಯತೆ ನೀಡಲಿಲ್ಲ, ಸರ್ವಶಕ್ತನಾದ ಅಲ್ಲಾಹನು ಅವರಿಗೆ ಉತ್ತಮ ಭಾಗವನ್ನು ನೀಡಲಿ. ಇಂತಹ ಜನರಿರಬೇಕು ಮತ್ತು ಇಂತಹ ಆತ್ಮ ಮತ್ತು ವಿಶ್ವಾಸವನ್ನು ಹೊಂದಿ ಇಲ್ಲಿಗೆ ಬರಬೇಕು.

ಅದೇ ರೀತಿ, ನಮ್ಮ ಕೆಲವು ಸ್ನೇಹಿತರು ಪ್ರತಿ ವರ್ಷ ಇಹಲೋಕ ತ್ಯಜಿಸುವುದನ್ನು ನಾನು ನೋಡುತ್ತೇನೆ. ಮುಂದಿನ ವರ್ಷ ಯಾರು ಇರುತ್ತಾರೆ ಮತ್ತು ಯಾರಿಗೆ ಕರೆಯ ಆಜ್ಞೆ ಬರುತ್ತದೆ ಎಂದು ಯಾರಿಗೆ ತಿಳಿದಿದೆ, ಆದ್ದರಿಂದ ಒಬ್ಬ ವ್ಯಕ್ತಿಯು ಈ ಜಗತ್ತನ್ನು ತೊರೆಯುವ ಮೊದಲು, ಅವನು ದೇವರೊಂದಿಗೆ ಸಂಧಾನ ಮಾಡಿಕೊಳ್ಳುವುದು ಅವಶ್ಯಕ ಮತ್ತು ಅವನು ಸಂದೇಶವಾಹಕನ ಮೇಲೆ ನಿಜವಾದ ಪ್ರೀತಿಯನ್ನು ಹೊಂದುವವರೆಗೂ ದೇವಾನುಗ್ರಹವನ್ನು ಹೊಂದಿರುವುದಿಲ್ಲ ಮತ್ತು ಈ ಪ್ರೀತಿಯು ಆತನಿಗೆ ವಿಧೇಯರಾಗುವ ಮೂಲಕ ಸಾಕ್ಷಿಯಾಗಬಹುದು.

ಮುರೀದ್ (ಶಿಶ್ಯ) ತನ್ನ ಮುರ್ಷಿದ್ (ಗುರು) ಅನ್ನು ಅತ್ಯುತ್ತಮವೆಂದು ಪರಿಗಣಿಸದ ಹೊರತು ಪ್ರಯೋಜನವಿಲ್ಲ ಎಂದು ಹೇಳುವ ಸೂಫಿಗಳು. ನನ್ನ ಪ್ರಕಾರ, ಇದು ಖಂಡಿತವಾಗಿಯೂ ಅಗತ್ಯ, ಆದರೆ ಮುರ್ಷಿದ್ ಎಲ್ಲಾ ಸಮಯದಲ್ಲೂ ಮುಂಗೋಪಿಯಾಗಿರುವುದು ಅವಶ್ಯಕ ಎಂದು ಹೇಳುವುದು ಸರಿಯಲ್ಲ ಎಂದು ನಾನು ಭಾವಿಸುತ್ತೇನೆ. ಒಬ್ಬ ವ್ಯಕ್ತಿಯು ತನ್ನ ನೈತಿಕತೆಯನ್ನು ಏಕೆ ಕಳೆದುಕೊಳ್ಳಬೇಕು? ಪ್ರವಾದಿತ್ವದ ಮಾರ್ಗವನ್ನು ತ್ಯಜಿಸಬೇಡಿ. ಅವರು ಮಹಾನ್ ಚಾರಿತ್ರ್ಯ ಮತ್ತು ಹೃದಯದ ಮನುಷ್ಯನಾಗಿರಬೇಕು ಮತ್ತು ದೇವರಿಂದ ಪ್ರವಾದಿತ್ವಕ್ಕೆ ಬರುವವರು ತಮ್ಮೊಂದಿಗೆ ಉತ್ತಮ ನೈತಿಕತೆಯನ್ನು

***(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)***

### *129 ನೇ ಜಲ್ಸಾ ಸಾಲಾನ ಖಾದಿಯಾನ್ 27, 28, 29 ಡಿಸೆಂಬರ್ 2024ರಂದು ಆಯೋಜಿಸಲಾಗುವುದು*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 129ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 27, 28 ಮತ್ತು 29ನೇ ಡಿಸೆಂಬರ್ 2024 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

# ಖುತ್‌ಬ ಜುಮುಅ

ಹಝ್ರತ್ ಪೈಗಂಬರ್(ಸ) ಅವರು ಅಹ್‌ಝಾಬ್ ಯುದ್ಧಕ್ಕಿಂದ ಮುಂಚೆ ಅಬೂಸುಫ್ಯಾನ್‌ಗೆ ಒಂದು ಪತ್ರದ ಉತ್ತರದಲ್ಲಿ ಹೀಗೆ ಬರೆದರು:
ಕೇಳಿರಿ! ಕೊನೆಗೆ ಅಲ್ಲಾಹನು ನಮಗೆ ವಿಜಯವನ್ನು ನೀಡುವನು. ಮತ್ತು ಓ ಪರಾಕ್ರಮಿಗಳ ಮೂರ್ಖರೇ! ನಿಮ್ಮ ಲಾತ್, ಉಝ್ಝಾ, ಇಸಾಫ್, ನೈಲಾ ಮತ್ತು ಹುಬಲ್ ಅನ್ನು ತುಂಡುಗಳಾಗಿ ಕತ್ತರಿಸುವ ದಿನ ಬರುತ್ತದೆ ಮತ್ತು ಆ ದಿನ ನಾನು ನಿಮಗೆ ಎಲ್ಲವನ್ನೂ ನೆನಪಿಸುತ್ತೇನೆ ಎಂದು ನೆನಪಿಡಿ.

ಹಝ್ರತ್ ಸಲ್ಮಾನ್ ಫಾರಸೀ(ರ) ಸಲಹೆ ಕೊಟ್ಟಿರಬಹುದು. ಆದರೆ ಅದನ್ನು ಕಾರ್ಯಗತಗೊಳಿಸುವ ತೀರ್ಮಾನವನ್ನು ಹಝ್ರತ್ ಪೈಗಂಬರ್(ಸ) ದಿವ್ಯವಾಣಿಯ ಮೂಲಕ ಮಾಡಿರಬಹುದು

**ಅಹ್‌ಝಾಬ್ ಯುದ್ಧದ ಕಾರಣಗಳು ಮತ್ತು ಅದರ ಆರಂಭಿಕ ಪರಿಸ್ಥಿತಿಗಳ ಮತ್ತು ಘಟನೆಗಳ ವಿವರಾತ್ಮಕ ಪ್ರಸ್ತಾವನೆ**

ಪಾಕಿಸ್ತಾನದ ಅಹ್ಮದಿಯರನ್ನು ವಿಶೇಷವಾಗಿ ದುಆಗಳಲ್ಲಿ ನೆನಪಿಡಿರಿ.
ಪಾಕಿಸ್ತಾನದ ಅಹ್ಮದಿಯರು ಸಹ ಸ್ವತಃ ದುಆದ ಮತ್ತು ದಾನಧರ್ಮಗಳ ಕಡೆಗೆ ಗಮನ ನೀಡಿರಿ.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **06-09-2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ
أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ
اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔
إِيَّاكَ نَعْبُدُ وَإِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔
صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಇಂದು ನಾನು ಖಂದಕ್ ಯುದ್ಧ ಅಥವಾ ಅಹ್‌ಝಾಬ್ ಎಂದು ಕರೆಯಲ್ಪಡುವ ಯುದ್ಧದ ಬಗ್ಗೆ ಪ್ರಸ್ತಾಪಿಸುತ್ತೇನೆ. ಅದು ಹಿಜರೀ 5ರಲ್ಲಿ, ಎಂದರೆ ಕ್ರಿ.ಶ. 627, ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ನಡೆದಿತ್ತು.

(ಸೀರತ್ ಖಾತಮುನ್ನಬಿಯೀನ್(ಸ), ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಎಂ.ಎ, ಪುಟ-573)

ಪವಿತ್ರ ಖುರ್‌ಆನಿನಲ್ಲಿ ಅಹ್‌ಝಾಬ್ ಯುದ್ಧದ ಪ್ರಸ್ತಾಪ ಹೀಗೆ ಬಂದಿದೆ:

أَعُوْذُ بِاللّٰهِ مِنَ الشَّيْطٰنِ الرَّجِيْمِ۔ يٰٓأَيُّهَا الَّذِيْنَ اٰمَنُوا اذْكُرُوْا نِعْمَةَ اللّٰهِ عَلَيْكُمْ إِذْ جَآءَتْكُمْ جُنُوْدٌ فَأَرْسَلْنَا عَلَيْهِمْ رِيْحًا وَّجُنُوْدًا لَّمْ تَرَوْهَا وَكَانَ اللّٰهُ بِمَا تَعْمَلُوْنَ بَصِيْرًا ﴿۱۰﴾ إِذْ جَآءُوْكُمْ مِّنْ فَوْقِكُمْ وَمِنْ أَسْفَلَ مِنْكُمْ وَإِذْ زَاغَتِ الْأَبْصَارُ وَبَلَغَتِ الْقُلُوْبُ الْحَنَاجِرَ وَتَظُنُّوْنَ بِاللّٰهِ الظُّنُوْنَا ﴿۱۱﴾ هُنَالِكَ ابْتُلِيَ الْمُؤْمِنُوْنَ وَزُلْزِلُوْا زِلْزَالًا شَدِيْدًا ﴿۱۲﴾ وَإِذْ يَقُوْلُ الْمُنٰفِقُوْنَ وَالَّذِيْنَ فِيْ قُلُوْبِهِمْ مَّرَضٌ مَّا وَعَدَنَا اللّٰهُ وَرَسُوْلُهٗٓ إِلَّا غُرُوْرًا ﴿۱۳﴾ وَإِذْ قَالَتْ طَّآئِفَةٌ مِّنْهُمْ يٰٓأَهْلَ يَثْرِبَ لَا مُقَامَ لَكُمْ فَارْجِعُوْا وَيَسْتَأْذِنُ فَرِيْقٌ مِّنْهُمُ النَّبِيَّ يَقُوْلُوْنَ إِنَّ بُيُوْتَنَا عَوْرَةٌ وَمَا هِيَ بِعَوْرَةٍ إِنْ يُّرِيْدُوْنَ إِلَّا فِرَارًا ﴿۱۴﴾ وَلَوْ دُخِلَتْ عَلَيْهِمْ مِّنْ أَقْطَارِهَا ثُمَّ سُئِلُوا الْفِتْنَةَ لَاٰتَوْهَا وَمَا تَلَبَّثُوْا بِهَآ إِلَّا يَسِيْرًا ﴿۱۵﴾ وَلَقَدْ كَانُوْا عَاهَدُوا اللّٰهَ مِنْ قَبْلُ لَا يُوَلُّوْنَ الْأَدْبَارَ وَكَانَ عَهْدُ اللّٰهِ مَسْئُوْلًا ﴿۱۶﴾ قُلْ لَّنْ يَّنْفَعَكُمُ الْفِرَارُ إِنْ فَرَرْتُمْ مِّنَ الْمَوْتِ أَوِ الْقَتْلِ وَإِذًا لَّا تُمَتَّعُوْنَ إِلَّا قَلِيْلًا ﴿۱۷﴾ قُلْ مَنْ ذَا الَّذِيْ يَعْصِمُكُمْ مِّنَ اللّٰهِ إِنْ أَرَادَ بِكُمْ سُوْٓءًا أَوْ أَرَادَ بِكُمْ رَحْمَةً وَلَا يَجِدُوْنَ لَهُمْ مِّنْ دُوْنِ اللّٰهِ وَلِيًّا وَّلَا نَصِيْرًا ﴿۱۸﴾ قَدْ يَعْلَمُ اللّٰهُ الْمُعَوِّقِيْنَ مِنْكُمْ وَالْقَآئِلِيْنَ لِإِخْوَانِهِمْ هَلُمَّ إِلَيْنَا وَلَا يَأْتُوْنَ الْبَأْسَ إِلَّا قَلِيْلًا ﴿۱۹﴾ أَشِحَّةً عَلَيْكُمْ فَإِذَا جَآءَ الْخَوْفُ رَأَيْتَهُمْ يَنْظُرُوْنَ إِلَيْكَ تَدُوْرُ أَعْيُنُهُمْ كَالَّذِيْ يُغْشٰى عَلَيْهِ مِنَ الْمَوْتِ فَإِذَا ذَهَبَ الْخَوْفُ سَلَقُوْكُمْ بِأَلْسِنَةٍ حِدَادٍ أَشِحَّةً عَلَى الْخَيْرِ أُولٰٓئِكَ لَمْ يُؤْمِنُوْا فَأَحْبَطَ اللّٰهُ أَعْمَالَهُمْ وَكَانَ ذٰلِكَ عَلَى اللّٰهِ يَسِيْرًا ﴿۲۰﴾ يَحْسَبُوْنَ الْأَحْزَابَ لَمْ يَذْهَبُوْا وَإِنْ يَّأْتِ الْأَحْزَابُ يَوَدُّوْا لَوْ أَنَّهُمْ بَادُوْنَ فِي الْأَعْرَابِ يَسْأَلُوْنَ عَنْ أَنْبَآئِكُمْ وَلَوْ كَانُوْا فِيْكُمْ مَّا قٰتَلُوْٓا إِلَّا قَلِيْلًا ﴿۲۱﴾ لَقَدْ كَانَ لَكُمْ فِيْ رَسُوْلِ اللّٰهِ أُسْوَةٌ حَسَنَةٌ لِّمَنْ كَانَ يَرْجُوا اللّٰهَ وَالْيَوْمَ الْاٰخِرَ وَذَكَرَ اللّٰهَ كَثِيْرًا ﴿۲۲﴾ وَلَمَّا رَاَ الْمُؤْمِنُوْنَ الْأَحْزَابَ قَالُوْا هٰذَا مَا وَعَدَنَا اللّٰهُ وَرَسُوْلُهٗ وَصَدَقَ اللّٰهُ وَرَسُوْلُهٗ وَمَا زَادَهُمْ إِلَّآ إِيْمَانًا وَّتَسْلِيْمًا ﴿۲۳﴾ مِنَ الْمُؤْمِنِيْنَ رِجَالٌ صَدَقُوْا مَا عَاهَدُوا اللّٰهَ عَلَيْهِ فَمِنْهُمْ مَّنْ قَضٰى نَحْبَهٗ وَمِنْهُمْ مَّنْ يَّنْتَظِرُ وَمَا بَدَّلُوْا تَبْدِيْلًا ﴿۲۴﴾ لِّيَجْزِيَ اللّٰهُ الصّٰدِقِيْنَ بِصِدْقِهِمْ وَيُعَذِّبَ الْمُنٰفِقِيْنَ إِنْ شَآءَ أَوْ يَتُوْبَ عَلَيْهِمْ إِنَّ اللّٰهَ كَانَ غَفُوْرًا رَّحِيْمًا ﴿۲۵﴾ وَرَدَّ اللّٰهُ الَّذِيْنَ كَفَرُوْا بِغَيْظِهِمْ لَمْ يَنَالُوْا خَيْرًا وَكَفَى اللّٰهُ الْمُؤْمِنِيْنَ الْقِتَالَ وَكَانَ اللّٰهُ قَوِيًّا عَزِيْزًا ﴿۲۶﴾ (الاحزاب:10تا26)

ಎಲೈ ವಿಶ್ವಾಸಿಗಳೇ, ನಿಮಗೆ ವಿರುದ್ಧವಾಗಿ ಕೆಲವು ಸೈನ್ಯಗಳು ಬಂದ ಸಂದರ್ಭದಲ್ಲಿ ನಿಮಗೆ ಅಲ್ಲಾಹನು ಪ್ರದಾನ ಮಾಡಿದ ಅನುಗ್ರಹವನ್ನು ಸ್ಮರಿಸಿರಿ. ಆಗ ಅವರ ವಿರುದ್ಧವಾಗಿ ಒಂದು ಗಾಳಿಯನ್ನೂ ನಿಮಗೆ ಗೋಚರಿಸದ ಸೈನ್ಯಗಳನ್ನೂ ನಾವು ಕಳುಹಿಸಿದ್ದೆವು. ನಿಮ್ಮ ಕೃತ್ಯಗಳನ್ನು ಅಲ್ಲಾಹನು ಚೆನ್ನಾಗಿ ಕಾಣುತ್ತಾನೆ.

ಅವರು ನಿಮ್ಮನ್ನು ಮೇಲ್ಭಾಗದಿಂದಲೂ ಕೆಳಭಾಗದಿಂದಲೂ ಸುತ್ತುವರಿದು ಬಂದ ಸಂದರ್ಭದಲ್ಲಿ! ಆಗ ನಿಮ್ಮ ಕಣ್ಣುಗಳು ಭಯವಿಹ್ವಲಗೊಂಡಿದ್ದವು; ನಿಮ್ಮ ಹೃದಯಗಳು ಕಂಠ ನಾಳಗಳಿಗೆ ತಲಪಿದ್ದವು; ಅಲ್ಲಾಹನ ಬಗ್ಗೆ ಹಲವು ಭಾವನೆಗಳು ನಿಮ್ಮ ಮನಸ್ಸಿನಲ್ಲಿ ಮೂಡಿದ್ದವು.

ಆ ಸಂದರ್ಭದಲ್ಲಿ ಸತ್ಯವಿಶ್ವಾಸಿಗಳು ಪರೀಕ್ಷೆಗೊಳಗಾದರು ಮತ್ತು ಬಲವಾದ ಕಂಪನದಿಂದ ಅವರು ಕಂಪಿಸಲ್ಪಟ್ಟರು.

ಆಗ ಕಪಟ ವಿಶ್ವಾಸಿಗಳು ಮತ್ತು ತಮ್ಮ ಹೃದಯಗಳಲ್ಲಿ ರೋಗವಿರುವವರು, 'ಅಲ್ಲಾಹನು ಮತ್ತು ಅವನ ಸಂದೇಶವಾಹಕ ನಮಗೆ ಸುಳ್ಳು ವಾಗ್ದಾನವನ್ನು ಮಾತ್ರವೇ ನೀಡಿದರು' ಎಂದು ಹೇಳಿದರು.

'ಮದೀನ ನಿವಾಸಿಗಳೇ, ಶತ್ರುಗಳ ವಿರುದ್ಧವಾಗಿ ನಿಮಗೇನೂ ನೆಲೆಯಿಲ್ಲ. ಆದ್ದರಿಂದ ನೀವು ಮರಳಿರಿ' ಎಂದು ಅವರಲ್ಲಿ ಒಂದು ಪಂಗಡದವರು ಹೇಳಿದ ಸಂದರ್ಭವನ್ನು ಸಹ ಸ್ಮರಿಸು. 'ನಮ್ಮ ಮನೆಗಳು ಅರಕ್ಷಿತಾವಸ್ಥೆಯಲ್ಲಿವೆ' ಎಂದು ಹೇಳಿ ಅವರ ಪೈಕಿ ಒಂದು ಗುಂಪು ಜನರು ಹಿಂತಿರುಗಲು ಪೈಗಂಬರರ ಅನುಮತಿ ಕೂಡ ಕೇಳಿದರು. ವಾಸ್ತವದಲ್ಲಿ ಅವರ ಮನೆಗಳು ಅರಕ್ಷಿತಾವಸ್ಥೆಯಲ್ಲಿರಲಿಲ್ಲ. ಅವರು ಕೇವಲ ತಪ್ಪಿಸಿ ಓಡಿಹೋಗಲು ಬಯಸಿದ್ದರು.

ಮದೀನದ ಸುತ್ತಮುತ್ತಲಿಂದ ಅವರು ಆಕ್ರಮಿಸಲ್ಪಟ್ಟು ಧರ್ಮ

ಪರಿತ್ಯಾಗಕ್ಕೆ ಅವರೊಡನೆ ಅಗತ್ಯಪಡಿಸಿದ್ದರೆ, ಅವರು ಕೂಡಲೇ ಹಾಗೆಯೇ ಮಾಡುತ್ತಿದ್ದರು; ಅವರೇನೂ ಹಿಂಜರಿಯುತ್ತಿರಲಿಲ್ಲ.

ತಾವು ಯುದ್ಧರಂಗದಿಂದ ಎಂದಿಗೂ ಹಿಂತಿರುಗಿ ಓಡಲಾರೆವೆಂದು ಇದಕ್ಕೆ ಮುಂಚೆ ಅವರು ಕಪಟವಿಶ್ವಾಸಿಗಳು ಅಲ್ಲಾಹನೊಡನೆ ಒಡಂಬಡಿಕೆ ಮಾಡಿಕೊಂಡಿದ್ದರು. ಅಲ್ಲಾಹನೊಡನೆ ಮಾಡಿದ ಒಡಂಬಡಿಕೆಯ ಬಗ್ಗೆ ಪ್ರಶ್ನಿಸಲಾಗುವುದು.

ಹೇಳು: 'ಮರಣ ಅಥವಾ ಹತ್ಯೆಗೆ ಭಯಪಟ್ಟು ನೀವು ಓಡಿಹೋದರೆ ಆ ಓಟದಿಂದ ನಿಮಗೇನೂ ಪ್ರಯೋಜನವಾಗದು. ನೀವು ಜೀವನದ ಸುಖವನ್ನೇನೂ ಪಡೆಯಲಾರಿರಿ.'

ಹೇಳು: 'ಅಲ್ಲಾಹನು ನಿಮಗೇನಾದರೂ ದೋಷವನ್ನುಂಟುಮಾಡಲು ಬಯಸಿದರೆ ಅದರಿಂದ ನಿಮ್ಮನ್ನು ರಕ್ಷಿಸುವವನು ಯಾರು? ಅಥವಾ ಅವನು ನಿಮ್ಮ ಮೇಲೆ ಕರುಣೆಯೇನಾದರೂ ತೋರಿಸಲು ಬಯಸಿದರೆ ಅದನ್ನು ಯಾರು ತಡೆಯಬಲ್ಲನು? ಅಲ್ಲಾಹನ ಹೊರತು ಯಾವ ಮಿತ್ರನನ್ನಾಗಲಿ, ಸಹಾಯಕನನ್ನಾಗಲಿ ಅವರು ಪಡೆಯಲಾರರು.

ನಿಮ್ಮ ಪೈಕಿ ಇತರರನ್ನು ಯುದ್ಧದಿಂದ ತಡೆಯುವವರನ್ನೂ ತಮ್ಮ ಸಹೋದರರೊಡನೆ ನೀವು ಯುದ್ಧಕ್ಕೆ ಹೋಗದೆ 'ನಮ್ಮ ಬಳಿಗೆ ಬನ್ನಿರಿ' ಎಂದು ಹೇಳುವವರನ್ನೂ ಅಲ್ಲಾಹನು ಚೆನ್ನಾಗಿ ಬಲ್ಲನು. ಅವರೆಂದಿಗೂ ಯುದ್ಧ ಮಾಡಲಾರರು.

ನಿಮ್ಮ ವಿಚಾರದಲ್ಲಿ ಅವರು ಜಿಪುಣರಾಗಿದ್ದಾರೆ. ನಿಮ್ಮ ಒಳಿತಾಗಲೆಂದು ಅವರೆಂದಿಗೂ ಬಯಸಲಾರರು. ಆದರೆ ಭಯದ ಸಂದರ್ಭ ಬಂದರೆ ಮೃತ್ಯುದಾಡೆಯಲ್ಲಿ ಸಿಲುಕಿದವನ ಕಣ್ಣುಗಳು ಮೂರ್ಛಾವಸ್ಥೆಯಲ್ಲಿ ತಿರುಗುವಂತೆ ನಿನ್ನ ಕಡೆಗೆ ಅವರು ನೋಡುತ್ತಿರುವುದಾಗಿ ನೀನು ಕಾಣುವೆ. ಆದರೆ ಭಯದ ಸಂದರ್ಭ ಕಳೆದರೆ ಸಂಪತ್ತಿನ ಅತ್ಯಾಶೆ ನಿಮಿತ್ತ ಹರಿತವಾದ ನಾಲಗೆಗಳಿಂದ ಅವರು ನಿಮ್ಮನ್ನು ನಿಂದಿಸುವರು. ಅವರು ವಿಶ್ವಾಸಿಗಳಲ್ಲ. ಆದ್ದರಿಂದ ಅವರ ಕರ್ಮಗಳನ್ನು ಅಲ್ಲಾಹನು ನಿಷ್ಫಲಗೊಳಿಸಿದ್ದಾನೆ. ಅಲ್ಲಾಹನಿಗೆ ಅದು ಸುಲಭ ಕಾರ್ಯವಾಗಿದೆ.

ಆ ಶತ್ರು ಸೇನೆಗಳು ಹೋಗಲಿಲ್ಲವೆಂದು ಅವರು ಭಾವಿಸುತ್ತಾರೆ. ಆ ಸೈನ್ಯಗಳು ಪುನಃ ಬಂದರೆ, ಮರಳುಗಾಡಿನ ಅರಬರೊಂದಿಗೆ ಸೇರಿಕೊಂಡು ಅಲೆಮಾರಿ ಜೀವನ ನಡೆಸಲು ಅವರು ಇಚ್ಛಿಸುತ್ತಾರೆ. ಅವರು ಅಲ್ಲಿಂದ ನಿಮ್ಮ ಬಗ್ಗೆ ಕೇಳಿ ತಿಳಿದುಕೊಳ್ಳುವರು. ಅವರು ನಿಮ್ಮ ಜೊತೆಯಲ್ಲಿರುತ್ತಿದ್ದರೆ ಕೂಡ ಅವರು ಯುದ್ಧ ಮಾಡುತ್ತಿರಲಿಲ್ಲ.

ನಿಸ್ಸಂದೇಹವಾಗಿಯೂ ನಿಮಗೆ ಅಲ್ಲಾಹನ ಸಂದೇಶವಾಹಕನಲ್ಲಿ ಒಂದು ಉತ್ತಮವಾದ ಮಾದರಿ ಇದೆ ಅಲ್ಲಾಹ್ ಮತ್ತು ಅಂತ್ಯದಿನದ ಭೇಟಿಯ ಬಗ್ಗೆ ನಿರೀಕ್ಷೆಯಿರುವವರಿಗೆ ಹಾಗೂ ಅಲ್ಲಾಹನನ್ನು ಅತ್ಯಧಿಕವಾಗಿ ಸ್ಮರಿಸುವವರಿಗೆ.

ಸತ್ಯ ವಿಶ್ವಾಸಿಗಳು ಆ ಶತ್ರು ಸೈನ್ಯವನ್ನು ಕಂಡಾಗ, 'ಇದು ಅಲ್ಲಾಹ್ ಮತ್ತು ಅವನ ಸಂದೇಶವಾಹಕ ನಮಗೆ ವಾಗ್ದಾನ ಮಾಡಿದುದಾಗಿದೆ. ಅಲ್ಲಾಹ್ ಮತ್ತು ಅವನ ಸಂದೇಶವಾಹಕ ಸತ್ಯವನ್ನೇ ನುಡಿದಿದ್ದಾರೆ' ಎಂದು ಹೇಳಿದರು. ಅದು ಆ ಘಟನೆ ಅವರ ವಿಶ್ವಾಸವನ್ನೂ ವಿಧೇಯತೆಯನ್ನೂ ವೃದ್ಧಿಗೊಳಿಸಿತು.

ಅಲ್ಲಾಹನೊಡನೆ ತಾವು ಮಾಡಿದ ಒಡಂಬಡಿಕೆಯನ್ನು ಪಾಲಿಸಿದ ಕೆಲವರು ಆ ಸತ್ಯವಿಶ್ವಾಸಿಗಳ ಪೈಕಿಯಲ್ಲಿದ್ದಾರೆ. ಅವರಲ್ಲಿ ಕೆಲವರು ತಮ್ಮ ಪ್ರತಿಜ್ಞೆಯನ್ನು ಈಡೇರಿಸಿದ್ದಾರೆ. ಇನ್ನು ಕೆಲವರು ಅದಕ್ಕೋಸ್ಕರ ಸಂದರ್ಭವನ್ನು ಕಾಯುತ್ತಿದ್ದಾರೆ. ಅವರು ತುಸು ಮಾತ್ರವಾದರೂ ಬದಲಾಗಲಿಲ್ಲ.

ಇದು ಅಲ್ಲಾಹನು ಸತ್ಯವಂತರಿಗೆ ಅವರ ಸತ್ಯತೆಗೆ ಪ್ರತಿಫಲವನ್ನು ನೀಡಲಿಕ್ಕೂ ಕಪಟ ವಿಶ್ವಾಸಿಗಳನ್ನು ಅವನು ಬಯಸಿದರೆ ಶಿಕ್ಷಿಸಲಿಕ್ಕೆ ಅಥವಾ ಅವರ ಮೇಲೆ ಕರುಣೆ ತೋರಿಸಲಿಕ್ಕೂ ಆಗಿದೆ. ನಿಸ್ಸಂದೇಹವಾಗಿಯೂ ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಕಾರುಣ್ಯವಂತನೂ ಆಗಿದ್ದಾನೆ.

ಅವಿಶ್ವಾಸಿಗಳನ್ನು ಅವರ ಕೋಪದೊಂದಿಗೆಯೇ ಅಲ್ಲಾಹನು ಮರಳಿಸಿದನು. ಅವರು ಒಳಿತನ್ನೇನೂ ಗಳಿಸಲಿಲ್ಲ. ಯುದ್ಧದಲ್ಲಿ ವಿಶ್ವಾಸಿಗಳಿಗೆ ಅಲ್ಲಾಹನು ಸಾಕು. ಅಲ್ಲಾಹನು ಶಕ್ತಿವಂತನೂ ಪ್ರತಾಪಶಾಲಿಯೂ ಆಗಿದ್ದಾನೆ. (ಅಲ್ಅಹ್‌ಝಾಬ್: ವಚನ 10 ರಿಂದ 26)

ನಾನು ಓದಿದ್ದು ಪವಿತ್ರ ಖುರ್‌ಆನಿನ ವಚನಗಳ ಅರ್ಥವಾಗಿದ್ದುವು.

ಈ ಯುದ್ಧವನ್ನು ಖಂದಕ್ ಯುದ್ಧವೆಂದು ಕರೆಯಲು ಕಾರಣವೇನೆಂದರೆ, ಈ ಯುದ್ಧದಲ್ಲಿ ಅರೇಬಿಯದ ರೂಢಿಗೆ ವಿರುದ್ಧವಾಗಿ ಮುಸ್ಲಿಮರು ಮೊದಲ ಬಾರಿ ದೊಡ್ಡ ಕಂದಕ ಅಗೆದು ಪಟ್ಟಣವನ್ನು ರಕ್ಷಣೆ ಮಾಡಿಕೊಂಡಿದ್ದರು. ಅದೇ ರೀತಿಯಲ್ಲಿ ಈ ಯುದ್ಧವನ್ನು ಅಹ್‌ಝಾಬ್ ಯುದ್ಧವೆಂದು ಕೂಡ ಹೇಳಲಾಗುತ್ತದೆ. ಪವಿತ್ರ ಖುರ್‌ಆನ್ ಸಹ ಅದಕ್ಕೆ ಈ ಹೆಸರನ್ನು ನೀಡಿದೆ. ಅಹ್‌ಝಾಬ್ ಎಂಬುದು ಹಿಝ್ಬ್ ಎಂಬುದರ ಬಹುವಚನವಾಗಿದೆ. ಅದರ ಅರ್ಥ ಸಂಘ ಅಥವಾ ಗುಂಪು ಎಂದಾಗಿದೆ. ಈ ಯುದ್ಧದಲ್ಲಿ ಅರೇಬಿಯದ ಅನೇಕ ಸಂಘಗಳು ಮತ್ತು ಗುಂಪುಗಳು ಒಟ್ಟಿಗೆ ಸೇರಿ ಮುಸ್ಲಿಮರ ಮೇಲೆ ದಾಳಿ ನಡೆಸಲು ಬಂದಿದ್ದರು. ಆದ್ದರಿಂದ ಅದನ್ನು ಅಹ್‌ಝಾಬ್ ಯುದ್ಧವೆಂದು ಕರೆಯಲಾಗುತ್ತದೆ.

ಈ ಯುದ್ಧದ ಕಾರಣವೇನೆಂದರೆ, ರಬೀಉಲ್ ಅವ್ವಲ್ ಹಿಜರೀ 4ರಲ್ಲಿ ಯಹೂದಿಗಳ ಗೋತ್ರ ಬನೂ ನಝೀರ್ ತಮ್ಮ ಪ್ರತಿಜ್ಞೆಯ ಉಲ್ಲಂಘನೆ ಮಾಡಿ, ದಂಗೆ ಮತ್ತು ಹಝ್‌ರತ್ ಪೈಗಂಬರ್(ಸ)ರನ್ನು ವಧಿಸಲು ಮಾಡಿದ ಷಡ್ಯಂತ್ರದ ಕಾರಣಗಳಿಂದ ಬನೂ ನಝೀರ್ ಗೋತ್ರವನ್ನು ಮದೀನದಿಂದ ಗಡಿಪಾರು ಮಾಡಲಾಗಿತ್ತು. ಈ ಗೋತ್ರದವರು ಖೈಬರ್‌ನಲ್ಲಿ ಹೋಗಿ ನೆಲೆಸಿದ್ದರು. ಇದು ಆದ ನಾಲ್ಕು ತಿಂಗಳ ನಂತರ ಔದಾರ್ಯವನ್ನು ಮರೆಯುವ ಮತ್ತು ಕುತಂತ್ರಗಳನ್ನು ಮಾಡುವ ಯಹೂದಿಗಳು ಹಝ್‌ರತ್ ಪೈಗಂಬರ್(ಸ) ಮತ್ತು ಇಸ್ಲಾಮಿನ ವಿರುದ್ಧ ಮುಸ್ಲಿಮರು ಸಂಪೂರ್ಣವಾಗಿ ನಾಶವಾಗುವಂತಹ ಅತ್ಯಂತ ಭಯಾನಕ ಯೋಜನೆ ರೂಪಿಸಿದರು. ಯೋಜನೆಯ ಪ್ರಕಾರ, ಬನೂ ನಝೀರ್‌ನ ಸರದಾರ ಹುಯ್ಯೀ ಬಿನ್ ಅಖ್ತಬ್, ತನ್ನ ಹೆಮ್ಮೆ ಮತ್ತು ದುರಹಂಕಾರ ಮತ್ತು ಇಸ್ಲಾಂ ಧರ್ಮದ ವಿರುದ್ಧ ದ್ವೇಷ ಮತ್ತು ಉತ್ಸಾಹದಿಂದಾಗಿ ಯಹೂದಿಗಳ ಅಬು ಜಹ್ಲ್ ಎಂದು ಕರೆಯಲು ಅರ್ಹನಾದನು, ಅವನು ತನ್ನ ಪ್ರಧಾನ ಸಂಗಡಿಗರೊಂದಿಗೆ ಮಕ್ಕಕ್ಕೆ ಹೋದನು ಹಾಗೂ ಅಲ್ಲಿ ಅಬೂಸುಫ್‌ಯಾನ್ ಮತ್ತು ಇತರ ಖುರೈಶಿ ಮುಖಂಡರನ್ನು ಭೇಟಿಯಾದನು. ಮುಸ್ಲಿಮರ ವಿರುದ್ಧ ಅವರೊಂದಿಗೆ ಸಹಕರಿಸುವುದಾಗಿ ಮಾತು ಕೊಟ್ಟನು. ಮುಹಮ್ಮದ್(ಸ.ಅ) ಮತ್ತು ಅವರ ಸಹಚರರ ಹೆಸರು ಮತ್ತು ಗುರುತು ಅಳಿಸಲು ನಾವು ನಿರ್ಧರಿಸಿದ್ದೇವೆ. ಮುಹಮ್ಮದ್ (ಸ.ಅ) ಮತ್ತು ಅವರ ಸಹಚರರ ವಿರುದ್ಧ ಒಪ್ಪಂದ ಮಾಡಿಕೊಳ್ಳಲು ನಾವೆಲ್ಲರೂ ಒಗ್ಗೂಡಿ ನಿಮ್ಮ ಬಳಿಗೆ ಬಂದಿದ್ದೇವೆ. ಖುರೈಷಿ ಅವಿಶ್ವಾಸಿಗಳಿಗೆ ಇನ್ನೇನು ಬೇಕು, ಅವರು ಈಗಾಗಲೇ ಈ ರಕ್ತಸಿಕ್ತ ಮಹತ್ವಾಕಾಂಕ್ಷೆಗಳನ್ನು ಹೊಂದಿದ್ದರು ಮತ್ತು ಬದ್ರ್ ಮತ್ತು ಉಹದ್‌ನಂತಹ ಯುದ್ಧಗಳನ್ನು ಮಾಡಿದರು, ಆದರೆ ಅವರಿಗೆ ತಮ್ಮ ಹೃದಯದ ಆಸೆಯನ್ನು ಪೂರೈಸಲು ಸಾಧ್ಯವಾಗಲಿಲ್ಲ. ಬದ್ರ್‌ನ ಸೇಡು ಮತ್ತು ಉಹದ್‌ನ ವಿಷಾದದ ಗಾಯಗಳು ಮತ್ತೆ ತಾಜಾವಾಯಿತು. ಬನೂ ನಝೀರ್‌ನ ಈ ಸರದಾರರನ್ನು ಅಬೂ ಸುಫ್‌ಯಾನ್ ಸ್ವಾಗತಿಸಿ ಬರಮಾಡಿಕೊಂಡನು ಮತ್ತು ಹೀಗೆ ಹೇಳಿದನು: ನೀವು ನಮ್ಮ ಮನೆಗೆ ಬಂದಿದ್ದೀರಿ. ಮುಹಮ್ಮದ್(ಸ)ರ ವಿರುದ್ಧವಾಗಿ ನಮಗೆ ಸಹಾಯ ಮಾಡುವವರು ನಮಗೆ ಎಲ್ಲರಿಗಿಂತ ಹೆಚ್ಚು ಪ್ರಿಯರಾಗಿದ್ದಾರೆ. ಪರಸ್ಪರ ಮಾತುಕತೆಯ ನಂತರ, ಐವತ್ತು ಖುರೈಶ್ ಜನರು ಮತ್ತು ಈ ಯಹೂದಿಗಳು, ಕಾಅ್‌ಬಾ ಭವನದ ಮುಸುಕನ್ನು ಹಿಡಿದು, ಒಬ್ಬರಿಗೊಬ್ಬರು ಬೆಂಬಲಿಸುತ್ತೇವೆ ಮತ್ತು ಅವರೆಲ್ಲರೂ ಮುಹಮ್ಮದ್(ಸ) ವಿರುದ್ಧ ಒಂದಾಗುತ್ತೇವೆ ಮತ್ತು ನಾವೆಲ್ಲರೂ ಒಟ್ಟಾಗಿ ಮುಹಮ್ಮದ್(ಸ) ಮತ್ತು ಅವರ ಸಹಚರರನ್ನು ನಾಶಪಡಿಸುತ್ತೇವೆ ಎಂದು ಪ್ರತಿಜ್ಞೆ ಮಾಡಿದರು. ಆದಾಗ್ಯೂ, ಅಬು ಸುಫ್ಯಾನ್‌ನೊಂದಿಗೆ ಮದೀನಾದ ಮೇಲೆ ಬೃಹತ್ ದಾಳಿಗೆ ಯೋಜನೆ ಮತ್ತು ದಿನಾಂಕವನ್ನು ನಿಗದಿಪಡಿಸಿದ ನಂತರ, ಬನೂ ನಝೀರ್‌ನ ಈ ತಂಡವು ಮುಸ್ಲಿಮರ ರಕ್ತಕ್ಕಾಗಿ ದಾಹದಲ್ಲಿದ್ದ ಅರೇಬಿಯಾದ ಇತರ ಗೋತ್ರಗಳ ಬಳಿಗೆ ಹೋಗಿ ಹಲವಾರು ವಿಫಲ ದಾಳಿಗಳನ್ನು ಮಾಡಿದರು. ಹಾಗಾಗಿ ಮೊದಲು ಬನೂ ಘತ್‌ಫಾನ್ ಬಳಿಗೆ ಹೋದರು. ಈ ಗೋತ್ರವು ಅರೇಬಿಯಾದಲ್ಲಿ ಧೈರ್ಯಶಾಲಿ ಗೋತ್ರ ಎಂದು ಪರಿಗಣಿಸಲಾಗಿತ್ತು ಮತ್ತು ಮುಸ್ಲಿಮರ ವಿರುದ್ಧ ದುರುದ್ದೇಶ ಮತ್ತು ಅಹಂಕಾರದಲ್ಲಿ ಪ್ರಮುಖವಾಗಿತ್ತು. ಯಹೂದಿಗಳು ಅವರನ್ನು ಹಝ್‌ರತ್ ಪೈಗಂಬರ್(ಸ)ರ ವಿರುದ್ಧ ಹೋರಾಡಲು ಆಹ್ವಾನಿಸಿದರು ಮತ್ತು ಅವರಿಗೆ ಖೈಬರ್‌ನ ಒಂದು ವರ್ಷದ ಖರ್ಜೂರಗಳನ್ನು ನೀಡುವುದಾಗಿ ಲಾಲಾಸೆ ನೀಡಿದ್ದರು ಮತ್ತು ಮಕ್ಕಾದ ಖುರೈಷಿಗಳು ಸಹ ನಮ್ಮೊಂದಿಗೆ ಇದ್ದಾರೆ ಎಂದು ತಿಳಿಸಿದ್ದರು. ಆದ್ದರಿಂದ ಬನೂ ಘತ್‌ಫಾನ್ ಗೋತ್ರದವರು ಸಹ ಅವರನ್ನು ಬೆಂಬಲಿಸುವುದಾಗಿ ಭರವಸೆ ನೀಡಿದರು ಮತ್ತು ಅವರ ಕಡೆಯಿಂದ 6,000 ಸೈನಿಕರನ್ನು ಖಾತರಿಪಡಿಸಿದರು. ಅದರ ನಂತರ, ಈ ಯಹೂದಿಗಳ ಗುಂಪು ಬನೂ ಸಲೀಮ್ ಬಳಿಗೆ ಹೋದರು. ಇದು ಇನ್ನೊಂದು ಮುಸಲ್ಮಾನರ ಮೇಲೆ ಆಕ್ರಮಣ ಮಾಡುವ ಮಹತ್ವಾಕಾಂಕ್ಷೆಯನ್ನು ಹೊಂದಿದ್ದ ಗೋತ್ರದವರಾಗಿದ್ದರು ಆದರೆ ಅವರು ವಿಫಲರಾಗಿದ್ದರು. ಅವರಿಗೆ ಇಷ್ಟು ದೊಡ್ಡ ಮಿತ್ರಪಕ್ಷಗಳ ಸೇನಾ ದಾಳಿಯ ಬಗ್ಗೆ ತಿಳಿದಾಗ, ಅವರು ಸಂತೋಷದಿಂದ ಬೆಂಬಲಿಸಿದರು.

(ಸಬ್ಲುಲ್ ಹುದಾ ವಾಲ್-ರಶಾದ್, ಸಂಪುಟ-4, ಪುಟಗಳು 363-364, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಘಝ್ವಾ-ಎ-ಅಹ್‌ಝಾಬ್,

ಅಲ್ಲಾಮಾ ಮುಹಮ್ಮದ್ ಅಹ್ಮದ್ ಬಾಶ್ಮೈಲ್, ಉರ್ದು ಬಜಾರ್‌ನ ನಫೀಸ್ ಅಕಾಡೆಮಿಯಿಂದ ಪ್ರಕಟಿತ, ಪುಟ-62, ಕರಾಚಿ)

ಅದೇ ರೀತಿ ಬನೂ ಫೂಝಾರಾ ತಮ್ಮ ಸರದಾರ ಉಯೈನಾ ನೇತೃತ್ವದಲ್ಲಿ ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಹೋರಾಡಲು ಸಿದ್ಧರಾದರು, ಮತ್ತು ಉಯ್ಯೈನಾ ತನ್ನ ಮಿತ್ರಪಕ್ಷ ಗೋತ್ರ ಬನೂ ಅಸದ್ ಅವರನ್ನೂ ಅಹ್ವಾನಿಸಿದರು, ಆದ್ದರಿಂದ ಬನೂ ಅಸದ್‌ನ ಸರದಾರ ತುಲೈಹಾ ಅಸದಿಯೂ ಸಹ ಈ ಅಹ್ವಾನವನ್ನು ಸ್ವೀಕರಿಸಿದನು ಮತ್ತು ಬನೂ ಮುರ್ರಾ ಮತ್ತು ಬನು ಅಶ್‌ಜಆ ಗೋತ್ರಗಳು ಈ ಯುದ್ಧದಲ್ಲಿ ಮಾನವಶಕ್ತಿಯನ್ನು ಗಮನಾರ್ಹವಾಗಿ ಹೆಚ್ಚಿಸಿದರು. ಈ ಎಲ್ಲ ಗೋತ್ರಗಳು ತಮ್ಮ ಶೌರ್ಯ ಮತ್ತು ಯುದ್ಧ ನಿಪುಣತೆಯ ಕಾರಣದಿಂದ ಪೂರ್ತಿ ಅರೇಬಿಯದಲ್ಲಿ ಹೆಸರುವಾಸಿಯಾಗಿದ್ದುವು. (ಸೀರತ್ ಎನ್‌ಸೈಕ್ಲೋಪೀಡಿಯಾ, ಸಂಪುಟ-07, ಪುಟ 270-271, ದಾರುಸ್ಸಲಾಮ್ ರಿಯಾದ್)

ಅದರ ಬಗ್ಗೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಬರೆಯುತ್ತಾರೆ, "ಮಕ್ಕಾದ ಖುರೈಶ್ ಮತ್ತು ನಜದ್‌ನ ಘತ್‌ಫಾನ್ ಮತ್ತು ಸುಲೈಮ್ ಗೋತ್ರದವರು ಮೊದಲಿನಿಂದಲೂ ಮುಸ್ಲಿಮರ ರಕ್ತಕ್ಕಾಗಿ ದಾಹ ಹೊಂದಿದ್ದರು ಮತ್ತು ಪ್ರತಿದಿನ ಮದೀನಾ ದಾಳಿಯ ಬಗ್ಗೆ ಚಿಂತಿಸುತ್ತಿದ್ದರು, ಆದರೆ ಇಲ್ಲಿಯವರೆಗೆ ಅವರು ಇಸ್ಲಾಂ ವಿರುದ್ಧ ಒಂದೇ ಕ್ಷೇತ್ರದಲ್ಲಿ ತಮ್ಮ ಪಡೆಗಳನ್ನು ಒಗ್ಗೂಡಿಸಲಿಲ್ಲ. ಆದರೆ ಯಹೂದಿ ಗೋತ್ರವಾದ ಬನೂ ನಝೀರ್‌ನ ಜನರು ತಮ್ಮ ವಿಶ್ವಾಸಘಾತುಕತನ ಮತ್ತು ದೇಶದ್ರೋಹದ ಕಾರಣದಿಂದಾಗಿ ಮದೀನಾದಿಂದ ಗಡೀಪಾರು ಆದಾಗ, ಅವರ ಮುಖ್ಯಸ್ಥರು ಈ ಓದಾರ್ಯ ಮತ್ತು ಪರೋಪಕಾರಿ ನಡವಳಿಕೆಯನ್ನು ಮರೆತುಬಿಟ್ಟರು" ಹಝ್ರತ್ ಪೈಗಂಬರ್(ಸ) ಅವರ ಮೇಲೆ ಬಹಳ ಓದಾರ್ಯವನ್ನು ತೋರಿದ್ದರು ಅದನ್ನು ಅವರು ಮರೆತಿರಿದ್ದರು "ಹಝ್ರತ್ ಪೈಗಂಬರ್(ಸ)ರು ಹೇಳಿದ್ದನ್ನು ಮರೆತು, ಅವರೆಲ್ಲರು ಪರಸ್ಪರ ಅರೇಬಿಯಾದ ಎಲ್ಲಾ ಚದುರಿದ ಶಕ್ತಿಗಳನ್ನು ಒಟ್ಟುಗೂಡಿಸಿ ಇಸ್ಲಾಂ ಧರ್ಮವನ್ನು ಸಂಪೂರ್ಣವಾಗಿ ನಾಶಪಡಿಸಲು ಪ್ರಯತ್ನಿಸಬೇಕು ಎಂದು ಚಿಂತನೆ ನಡೆಸಿದರು. ಮತ್ತು ಯಹೂದಿಯರು ಬಹಳ ಚತುರರು ಮತ್ತು ಚಾಲಾಕಿ ಜನರು ಆಗಿರುವುದರ ಕಾರಣದಿಂದ ಈ ರೀತಿಯ ಕುತಂತ್ರದ ಕೆಲಸಗಳಲ್ಲಿ ಬಹಳ ನಿಪುಣತೆ ಹೊಂದಿದ್ದರು. ಆದ್ದರಿಂದ ಅವರ ಈ ಕಲಹಕಾರಿ ಪ್ರಯತ್ನಗಳು ಯಶಸ್ವಿಯಾಯಿತು. ಹೀಗೆ ಅರೇಬಿಯದ ಗೋತ್ರಗಳು ಒಗ್ಗಟ್ಟಾಗಿ ಮುಸ್ಲಿಮರ ವಿರುದ್ಧ ಯುದ್ಧಕ್ಕಾಗಿ ಹೊರಟು ಬಂದರು. ಯಹೂದಿ ಮುಖ್ಯಸ್ಥರಾದ ಸಲ್ಲಾಮ್ ಬಿನ್ ಅಬಿಲ್ ಹುಖೈಖ್, ಹುಯ್ ಇಬ್ನೆ ಅಖ್ತಬ್ ಮತ್ತು ಕಿನಾನ ಬಿನ್ ಅರ್‌ರಬೀ ಈ ವಿಶೇಷವಾಗಿ ಪ್ರೇರಣೆಯಲ್ಲಿ ಭಾಗವಹಿಸಿದರು. ಆದ್ದರಿಂದ ಈ ಪಿತೂರಿಗಳು ತಮ್ಮ ಹೊಸ ತಾಯ್ನಾಡು ಖೈಬರ್‌ನಿಂದ ಹೊರಟು ಹಿಜಾಝ್ ಮತ್ತು ನಜ್ದ್ ಗೋತ್ರಗಳಿಗೆ ಭೇಟಿ ನೀಡಿದರು ಮತ್ತು ಮೊದಲು ಮಕ್ಕಾಗೆ ತಲುಪಿ ಖುರೈಶರನ್ನು ತಮ್ಮೊಂದಿಗೆ ಒಟ್ಟುಗೂಡಿಸಿದರು ಮತ್ತು ಖುರೈಶರ ಮುಖ್ಯಸ್ಥರನ್ನು ಮೆಚ್ಚಿಸಲು ಮುಸ್ಲಿಮರ ಧರ್ಮಕ್ಕಿಂತ ನಿಮ್ಮ ಧರ್ಮ (ಬಹುದೇವಾರಾಧನೆ ಮತ್ತು ಮೂರ್ತಿ ಪೂಜೆ) ಉತ್ತಮ ಎಂದು ಹೇಳಲು ಸಹ ಹಿಂಜರಿಯಲಿಲ್ಲ. ಅದರ ನಂತರ, ಅವರು ನಜದ್‌ಗೆ ಹೋಗಿ ಘತ್‌ಫಾನ್ ಗೋತ್ರದವರನ್ನು ತಮ್ಮೊಂದಿಗೆ ಸೇರಿಸಿಕೊಂಡರು ಮತ್ತು ಈ ಗೋತ್ರದ ಶಾಖೆಗಳಾದ ಫುಝಾರಾ, ಮುರ್ರಾ ಮತ್ತು ಅಶ್‌ಜಆ ಮುಂತಾದವರನ್ನು ತಮ್ಮೊಂದಿಗೆ ಹೊರಡಲು ಸಿದ್ಧಗೊಳಿಸಿದರು. ನಂತರ, ಖುರೈಶ್ ಮತ್ತು ಘತ್‌ಫಾನ್‌ನ ಪ್ರಚೋದನೆಯಿಂದಾಗಿ, ಬನೂ ಸುಲೈಮ್ ಮತ್ತು ಬನೂ ಅಸದ್ ಗೋತ್ರದವರಿಗೂ ಈ ಇಸ್ಲಾಮಿ ವಿರೋಧಿ ಮೈತ್ರಿಯ ಸರಪಳಿಯಲ್ಲಿ ಸೇರಿಕೊಂಡರು ಮತ್ತು ಮತ್ತೊಂದೆಡೆ, ಯಹೂದಿಗಳು ತಮ್ಮ ಮಿತ್ರಪಕ್ಷರಾದ ಬನೂ ಸಾಅದ್ ಗೋತ್ರದವರಿಗೆ ಸಂದೇಶವನ್ನು ಕಳುಹಿಸಿ ಅವರ ಬೆಂಬಲಕ್ಕೆ ನಿಲ್ಲಿಸಿದರು. ಈ ಮಹಾನ್ ಮೈತ್ರಿಯ ಜೊತೆಗೆ, ಖುರೇಷಿಗಳು ತಮ್ಮ ಅಧೀನದಲ್ಲಿರುವ ಅನೇಕ ಜನರನ್ನು ಒಟ್ಟುಗೂಡಿಸಿದರು, ಮತ್ತು ನಂತರ ಎಲ್ಲಾ ಸಿದ್ಧತೆಗಳ ನಂತರ, ಅರೇಬಿಯ ಮರುಭೂಮಿಯ ಈ ರಕ್ತಪಿಪಾಸು ಗೋತ್ರದ ಜನಾಂಗದವರು ಮುಸ್ಲಿಮರನ್ನು ವಧಿಸುವ ಉದ್ದೇಶದಿಂದ ದೊಡ್ಡ ಯೋಜನೆಯನ್ನು ರೂಪಿಸಿ ಮದೀನಾ ಮತ್ತು ಇಸ್ಲಾಂ ಧರ್ಮವನ್ನು ಪ್ರಪಂಚದ ಮುಖದಿಂದ ಅಳಿಸಿಹಾಕುವವರೆಗೂ ಅವರು ಹಿಂತಿರುಗುವುದಿಲ್ಲ ಎಂದು ಪ್ರತಿಜ್ಞೆ ಮಾಡಿದರು. (ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಎಂ.ಎ, ಪುಟ 573-574)

ಹಝ್ರತ್ ಮುಸ್ಲೆಹ್ ಮೌಊದ್(ರ) ಈ ಸಂಬಂಧವಾಗಿ ಹೇಳುತ್ತಾರೆ: "ಯಹೂದಿಗಳ ಎರಡು ಗೋತ್ರದವರನ್ನು..... ಗಲಭೆ, ಕಿಡಿಗೇಡಿತನ, ಕೊಲೆ ಮತ್ತು ವಧಿಸುವ ಯೋಜನೆಗಳಿಂದಾಗಿ ಮದೀನಾದಿಂದ ಗಡಿಪಾರು ಮಾಡಲಾಗಿತ್ತು. ಅವರಲ್ಲಿ, ಬನೂ ನಝೀರ್‌ನ ಸ್ವಲ್ಪ ಭಾಗವು ಸಿರಿಯಾಗೆ ವಲಸೆ ಹೋಗಿತ್ತು ಮತ್ತು ಅವರಲ್ಲಿ ಸ್ವಲ್ಪ ಭಾಗವು ಮದೀನಾದಿಂದ ಉತ್ತರಕ್ಕೆ ಖೈಬರ್ ಎಂಬ ನಗರಕ್ಕೆ ವಲಸೆ ಹೋಗಿತ್ತು. ಅರೇಬಿಯದಲ್ಲಿ ಖೈಬರ್ ಎಂಬುದು ಯಹೂದಿಯರ ಬಹಳ ದೊಡ್ಡ ಕೇಂದ್ರ ಮತ್ತು ಕೋಟೆಗಳಿಂದ ಆವೃತವಾದ ಪಟ್ಟಣವಾಗಿದೆ. ಇಲ್ಲಿಗೆ ತಲುಪಿ ಬನೂ ನಝೀರ್ ಗೋತ್ರವು ಅರೇಬಿಯರಲ್ಲಿ ಮುಸ್ಲಿಮರ ವಿರುದ್ಧ ಕೋಪವನ್ನು ಹರಡಲು ಆರಂಭಿಸಿದರು. ಮಕ್ಕದ ಜನರು ಮೊದಲಿನಿಂದಲೇ ವಿರೋಧಿಗಳಾಗಿದ್ದರು, ಮತ್ತೆ ಯಾವುದೇ ರೀತಿಯ ಹೆಚ್ಚು ಪ್ರಚೋದನೆಯ ಅಗತ್ಯವಿರಲಿಲ್ಲ. ಅದೇ ರೀತಿ ಅರಬ್ ಗೋತ್ರಗಳಲ್ಲಿ ಶ್ರೇಷ್ಠ ಸ್ಥಾನಮಾನವನ್ನು ಹೊಂದಿದ್ದ ನಜದರ ಗೋತ್ರವಾದ ಘತ್‌ಫಾನ್ ಜನರು ಕೂಡ ಮಕ್ಕದ ಜನರ ಸ್ನೇಹದಲ್ಲಿ ಇಸ್ಲಾಮಿನೊಂದಿಗೆ ವೈರತ್ವ ಸಾಧಿಸಲು ಸಿದ್ಧರಾದರು. ಈಗ ಯಹೂದಿಗಳು, ಖುರೈಶ್ ಮತ್ತು ಘತ್‌ಫಾನ್‌ರನ್ನು ಪ್ರೋತ್ಸಾಹಿಸುವುದರ ಜೊತೆಗೆ, ಎರಡು ಪ್ರಬಲ ಗೋತ್ರಗಳಾದ ಬನೂ ಸುಲೈಮ್ ಮತ್ತು ಬನೂ ಅಸದ್‌ರನ್ನು ಮುಸ್ಲಿಮರ ವಿರುದ್ಧ ಪ್ರಚೋದಿಸಲು ಪ್ರಾರಂಭಿಸಿದರು ಮತ್ತು ಅದೇ ರೀತಿಯಲ್ಲಿ ಅವರು ಯಹೂದಿಯರ ಮಿತ್ರಪಕ್ಷರಾಗಿದ್ದ ಬನೂ ಸಾಅದ್ ಗೋತ್ರದವರನ್ನು ಸಿದ್ಧಪಡಿಸಿದರು. ಒಂದು ದೀರ್ಘಾವಧಿಯ ತಯಾರಿಯ ನಂತರ ಅರೇಬಿಯದ ಎಲ್ಲ ಶಕ್ತವಾದ ಗೋತ್ರಗಳ ಒಕ್ಕೂಟದ ಬುನಾದಿ ಹಾಕಲಾಯಿತು. ಈ ಒಕ್ಕೂಟದಲ್ಲಿ ಮಕ್ಕಾ ಮತ್ತು ಆಸುಪಾಸಿನ ಗೋತ್ರಗಳು ಕೂಡ ಇದ್ದುವು. ನಜದ್ ಮತ್ತು ಮದೀನದ ಉತ್ತರ ದಿಕ್ಕಿನ ಕಡೆಯ ಗೋತ್ರಗಳು ಕೂಡ ಇದ್ದುವು. ಯಹೂದಿಗಳು ಕೂಡ ಇದ್ದರು. ಈ ಎಲ್ಲ ಗೋತ್ರಗಳು ಸೇರಿಕೊಂಡು ಮದೀನದ ಮೇಲೆ ದಾಳಿ ನಡೆಸಲು ಒಂದು ಪ್ರಬಲವಾದ ಸೇನೆಯನ್ನು ತಯಾರು ಮಾಡಿದುವು.

(ಮುನ್ನುಡಿ ತಫ್ಸೀರ್ ಅಲ್-ಖುರ್‌ಆನ್, ಅನ್ವರುಲ್ ಉಲೂಮ್, ಸಂಪುಟ-20, ಪುಟ-267)

ಈ ಯುದ್ಧಕ್ಕಾಗಿ ಖುರೈಶ್ ಮತ್ತು ಇತರ ಗೋತ್ರಗಳ ನಿರ್ಗಮನ ಮತ್ತು ಅವರ ಸಂಖ್ಯೆಯನ್ನು ಈ ಕೆಳಗಿನಂತೆ ವಿವರಿಸಲಾಗಿದೆ. ಮಕ್ಕಾದ ಖುರೈಶಿಗಳು ನಾಲ್ಕು ಸಾವಿರ ಸೈನಿಕರೊಂದಿಗೆ ಹೊರಟರು. ಅಬೂಸುಫ್‌ಯಾನ್ ಅವರ ನೇತೃತ್ವವನ್ನು ವಹಿಸಿಕೊಂಡಿದ್ದರು. ಸವಾರರ ನೇತೃತ್ವವನ್ನು ಖಾಲಿದ್ ಬಿನ್ ವಲೀದ್ ವಹಿಸಿಕೊಂಡಿದ್ದರು. ಅವರು ಧ್ವಜವನ್ನು ಖುರೈಶಿಗಳ ಸಮಾಲೋಚನಾ ಸ್ಥಳವಾಗಿದ್ದ ದಾರುನ್ನದ್ವದಲ್ಲಿ ನೆಟ್ಟರು ಮತ್ತು ಅದನ್ನು ಉಸ್ಮಾನ್ ಬಿನ್ ತಲ್ಹಾ ಅವರು ಎತ್ತಿದ್ದರು. ನಂತರ ಅವರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. ಮತ್ತು ತಮ್ಮೊಂದಿಗೆ ಮುನ್ನೂರು ಕುದುರೆಗಳಿದ್ದವು ಮತ್ತು ಅವರೊಂದಿಗೆ ಹದಿನೈದು ನೂರು ಒಂಟೆಗಳಿದ್ದವು. ಬನೂ ಸುಲೈಂ ಗೋತ್ರದ 700 ವ್ಯಕ್ತಿಗಳು ಖುರೈಶಿಯರ ಜೊತೆಗೆ ಸೇರಿಕೊಂಡರು. ಅವರ ನೇತೃತ್ವ ಸುಫ್‌ಯಾನ್ ಬಿನ್ ಅಬ್ದೀ ಶಮ್ಸಿನ ಕೈಯಲ್ಲಿ ಇತ್ತು. ಬನೂ ಅಸದ್ ಗೋತ್ರವು ತುಲೈಹ ಬಿನ್ ಖುವೈಲಿದ್‌ನ ನೇತೃತ್ವದಲ್ಲಿ ಹೊರಟಿತು. ಬನೂ ಫಝ್ಝಾರ ಗೋತ್ರದ ಒಂದು ಸಾವಿರ ವ್ಯಕ್ತಿಗಳು ಹೊರಟರು. ಅದರ ನೇತೃತ್ವವನ್ನು ಐನಿಯ ನೋಡುತ್ತಿದ್ದನು. ಬನೂ ಅಶ್‌ಜಅ್ ನಾಲ್ಕು ಸಾವಿರ ಮತ್ತು ಬನೂ ಮುರ್ರದ ನಾಲ್ಕು ಸಾವಿರ ಜನರು ಹೊರಟರು. ಆರು ಸಾವಿರ ಸೈನಿಕರನ್ನು ಕೊಡುವುದಾಗಿ ಬನೂ ಗತ್‌ಫಾನ್ ಗೋತ್ರದ ವಾಗ್ದಾನವಿತ್ತು. ಯಹೂದಿಯರ ಕಡೆಯಿಂದ ಎರಡು ಸಾವಿರ ಕಾದಿರಿಸಿದ ಸೈನಿಕರಿದ್ದರು. ಹೀಗೆ ವಿವಿಧ ಗೋತ್ರಗಳ ಈ ಸೈನಿಕರ ಒಟ್ಟು ಸಂಖ್ಯೆ ಕನಿಷ್ಠ ಹತ್ತು ಸಾವಿರವಾಗಿತ್ತು. ಕೆಲವು ವರದಿಗಳ ಪ್ರಕಾರ 24 ಸಾವಿರ ಎಂದು ಹೇಳಲಾಗಿದೆ. ಅವರೆಲ್ಲರ ಮುಂದಾಳುತ್ವ ಅಬೂ ಸುಫ್‌ಯಾನ್ ಬಿನ್ ಹರಬಿನ ಕೈಯಲ್ಲಿತ್ತು. ಅದು ಅಂದಿನ ತನಕದ ಅರೇಬಿಯದ ಚರಿತ್ರೆಯಲ್ಲಿ ಅತ್ಯಂತ ದೊಡ್ಡ ಸೇನಾ ಕಾರ್ಯಾಚರಣೆಯಾಗಿತ್ತು. (ಹಯಾತೆ ಮುಹಮ್ಮದ್(ಸ), ಮುಹಮ್ಮದ್ ಹುಸೈನ್ ಹೈಕಲ್, ಪುಟ-434, ಬಿಕ್ ಕಾರ್ನರ್ ಜ್ಹೇಲಮ್) (ಸಬ್ಲುಲ್ ಹುದಾ ವಲ್ ರಶಾದ್, ಸಂಪುಟ-4, ಪುಟ-364, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಅಲ್ಲಾಮ ಮುಹಮ್ಮದ್ ಅಹ್ಮದ್ ಬಾಶ್ಮಾಯಿಲ್ ಅವರ ಘಝ್ವಾ ಎ ಅಹ್ಜಾಬ್, ಪುಟ-153, ನಫೀಸ್ ಅಕಾಡೆಮಿ ಉರ್ದು ಬಾಝಾರ್) (ಫರ್ಹಂಗ್ ಸೀರತ್, ಪುಟ-299, ಝೋವರ್ ಅಕಾಡೆಮಿ ಕರಾಚಿ)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ: "ಅವಿಶ್ವಾಸಿಗಳ ಈ ಮಹಾ ಸೇನೆಯನ್ನು ಹತ್ತು ಸಾವಿರದಿಂದ ಹದಿನೈದು ಸಾವಿರದವರೆಗೆ ಅಂದಾಜಿಸಲಾಗಿದೆ, ಬದಲಿಗೆ ಕೆಲವು ವರದಿಗಳ ಪ್ರಕಾರ, ಇದನ್ನು ಇಪ್ಪತ್ತನಾಲ್ಕು ಸಾವಿರದವರೆಗೆ ಅಂದಾಜಿಸಲಾಗಿದೆ. ಹತ್ತು ಸಾವಿರ ಸೈನಿಕರು ಇದ್ದರು ಎಂಬ ಅಂದಾಜನ್ನು ಸರಿಯೆಂದು ಒಪ್ಪುವುದಾದರೆ ಕೂಡ ಅಂದಿನ ಕಾಲದ ಮಟ್ಟದಲ್ಲಿ ಅದು ಬಹಳ ದೊಡ್ಡ ಸಂಖ್ಯೆಯಾಗಿತ್ತು. ಬಹುಶಃ ಇದಕ್ಕಿಂತ ಮುಂಚೆ ಅರೇಬಿಯದ ಗೋತ್ರೀಯ ಯುದ್ಧದಲ್ಲಿ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಜನರು ಯಾವುದೇ ಯುದ್ಧದಲ್ಲಿ

ಭಾಗಿಯಾಗಿರಲಿಲ್ಲ...... ಇಡೀ ಸೈನ್ಯದ ಸೇನಾಧಿಪತಿ ಅಬೂಸುಫ್ಯಾನ್ ಬಿನ್ ಹರ್ಬ್ ಆಗಿದ್ದನು..... ಆಹಾರ ಪಾನೀಯದ ಸಾಮಗ್ರಿಗಳು ಮತ್ತು ಯುದ್ಧ ಸಾಮಗ್ರಿಗಳು ಎಲ್ಲ ರೀತಿಯಲ್ಲೂ ಸಾಕಷ್ಟು ಇದ್ದುವು. ಈ ಸೈನ್ಯ ಹಿಜರೀ 5, ಶವ್ವಾಲ್ ತಿಂಗಳಲ್ಲಿ ಎಂದರೆ ಕ್ರಿ.ಶ. 627 ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಮದೀನದ ಕಡೆಗೆ ಹೊರಟಿತು. (ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್‌ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ-574)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಅನೇಕ ಚರಿತ್ರೆಗಾರರು ಈ ಸೇನೆಯ ಸೈನಿಕರ ಸಂಖ್ಯೆಯನ್ನು ಹತ್ತು ಸಾವಿರದಿಂದ 24 ಸಾವಿರದಷ್ಟು ಇದ್ದಿರಬಹುದು ಎಂದು ಅಂದಾಜು ಹಾಕಿದ್ದಾರೆ. ಆದರೆ ಪೂರ್ತಿ ಅರೇಬಿಯದ ಜನರು ಒಟ್ಟುಗೂಡಿದ್ದ ಈ ಸೇನೆಯಲ್ಲಿ ಕೇವಲ ಹತ್ತು ಸಾವಿರ ಸೈನಿಕರು ಮಾತ್ರವಿದ್ದರು ಎಂದು ಹೇಳಲು ಸಾಧ್ಯವಿಲ್ಲ. ನಿಸ್ಸಂಶಯವಾಗಿಯೂ 24 ಸಾವಿರ ಸಂಖ್ಯೆಯು ಅಂದಾಜು ಹೆಚ್ಚು ಸರಿಯಾಗಿದೆ. ಎಷ್ಟಿಲ್ಲವೆಂದರೂ ಈ ಸೇನೆ ಹದಿನೆಂಟು ಇಪ್ಪತ್ತು ಸಾವಿರ ಸೈನಿಕರನ್ನು ಖಂಡಿತವಾಗಿಯೂ ಒಳಗೊಂಡಿರಬಹುದು. ಮದೀನ ಒಂದು ಸಾಮಾನ್ಯ ಪಟ್ಟಣವಾಗಿತ್ತು. ಈ ಪಟ್ಟಣದ ವಿರುದ್ಧವಾಗಿ ಪೂರ್ತಿ ಅರೇಬಿಯದ ದಾಳಿ ಸಾಧಾರಣ ದಾಳಿಯಾಗಿರಲಿಲ್ಲ. ಮದೀನದ ವೃದ್ಧರು, ಯುವಕರು, ಮಕ್ಕಳು ಸಮೇತ ಎಲ್ಲ ಪುರುಷರನ್ನು ಒಟ್ಟು ಸೇರಿಸಿದರೆ ಕೂಡ ಕೇವಲ ಮೂರು ಸಾವಿರದಷ್ಟು ಜನರು ಇರಬಹುದು. ಅದರ ವಿರುದ್ಧವಾಗಿ ಎದುರಾಳಿಗಳ ಸೇನೆ ಇಪ್ಪತ್ತು ಇಪ್ಪತ್ತನಾಲ್ಕು ಸಾವಿರ ಸೈನಿಕರನ್ನು ಒಳಗೊಂಡಿತ್ತು. ಮಾತ್ರವಲ್ಲ ಅವರೆಲ್ಲರೂ ಯೋಧರಾಗಿದ್ದರು. ಯುವಕರು ಮತ್ತು ಹೋರಾಡಲು ಸಮರ್ಥರಾಗಿದ್ದರು ಏಕೆಂದರೆ ನಗರದಲ್ಲಿದ್ದು ಸುರಕ್ಷತೆಯ ಪ್ರಶ್ನೆ ಉದ್ಭವಿಸಿದಾಗ, ಮಕ್ಕಳು ಮತ್ತು ವೃದ್ಧರೂ ಸಹ ಭಾಗಿಯಾಗುತ್ತಾರೆ. ಆದರೆ ಸೈನ್ಯವು ದೂರದ ಸ್ಥಳಕ್ಕೆ ದಾಳಿ ಮಾಡಲು ಹೋದಾಗ, ಅದರಲ್ಲಿ ಯುವಕರು ಮತ್ತು ಬಲಿಷ್ಠರು ಮಾತ್ರ ಇರುತ್ತಾರೆ. ಆದ್ದರಿಂದ ಸತ್ಯನಿಷೇಧಿಗಳ ಸೈನ್ಯದಲ್ಲಿ ಇಪ್ಪತ್ತು ಸಾವಿರ ಅಥವಾ ಇಪ್ಪತ್ತೈದು ಸಾವಿರ ಜನರು ಬಲಶಾಲಿಗಳು, ಯುವಕರು ಮತ್ತು ಅನುಭವಿ ಸೈನಿಕರಾಗಿದ್ದರು ಎಂದು ಖಚಿತವಾಗಿದೆ. ಆದರೆ ಮಕ್ಕಳು ಮತ್ತು ಅಂಗವಿಕಲರು ಸೇರಿದಂತೆ ಮದೀನಾದಲ್ಲಿ ಒಟ್ಟು ಪುರುಷರ ಸಂಖ್ಯೆ ಕೇವಲ ಮೂರು ಸಾವಿರದ್ದಾಗಿತ್ತು. ಈ ವಿಷಯಗಳನ್ನು ಗಣನೆಗೆ ತೆಗೆದುಕೊಂಡರೆ ಮದೀನಾದ ಸೈನ್ಯದ ಸಂಖ್ಯೆ ಮೂರು ಸಾವಿರ ಎಂದು ಪರಿಗಣಿಸಿದರೆ, ಶತ್ರುಗಳ ಸಂಖ್ಯೆಯು ನಲವತ್ತು ಸಾವಿರ ಎಂದು ಪರಿಗಣಿಸಬೇಕು ಮತ್ತು ಶತ್ರುಗಳ ಸೈನ್ಯದ ಸಂಖ್ಯೆಯು ಇಪ್ಪತ್ತು ಸಾವಿರ ಎಂದು ಪರಿಗಣಿಸಿದಾಗ ಮದೀನಾದ ಸೈನಿಕರನ್ನು ನಲವತ್ತು ಸಾವಿರ ಎಂದು ಪರಿಗಣಿಸಬೇಕಾಗುವುದು.” (ದೀಬಾಚ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ-20, ಪುಟ-267-268) ಏಕೆಂದರೆ ಅವರಲ್ಲಿ ದುರ್ಬಲ ಜನರೂ ಸಹ ಸೇರಿದ್ದರು.

ಆದಾಗ್ಯೂ, ಸತ್ಯನಿಷೇಧಿಗಳ ಈ ತಯಾರಿಯ ಮಾಹಿತಿ ಹಝ್ರತ್ ಪೈಗಂಬರ್(ಸ)ರಿಗೆ ಲಭಿಸಿದಾಗ ಕಂದಕವನ್ನು ಅಗೆಯಲು ಅವರು ತೀರ್ಮಾನಿಸಿದರು. ಇದರ ವಿವರಣೆಯಲ್ಲಿ ಹೀಗೆ ಬರೆಯಲಾಗಿದೆ: ಹಝ್ರತ್ ಪೈಗಂಬರ್(ಸ)ರ ಗುಪ್ತಚಾರ ವಿಭಾಗಕ್ಕೆ ಈ ಎಲ್ಲ ಸ್ಥಿತಿಗಳ ಬಗ್ಗೆ ಅರಿವಿತ್ತು. ಎಲ್ಲ ಕಡೆಯಿಂದಲೂ ಮಾಹಿತಿಗಳು ಹಝ್ರತ್ ಪೈಗಂಬರ್(ಸ)ರಿಗೆ ತಲುಪುತ್ತಿದ್ದುವು. ಖುರೈಶಿಯರ ಮತ್ತು ಯಹೂದಿಯರ ಈ ಭಯಾನಕ ಯೋಜನೆಯ ಸುದ್ದಿ ಮದೀನಕ್ಕೆ ತಲುಪಿದಾಗ ಹಝ್ರತ್ ಪೈಗಂಬರ್(ಸ) ಸಹಾಬಿಯರನ್ನು ಒಟ್ಟು ಸೇರಿಸಿದರು ಮತ್ತು ಅವರಿಗೆ ಶತ್ರುಗಳ ದುರುದ್ದೇಶಗಳ ಬಗ್ಗೆ ತಿಳಿಸಿಕೊಟ್ಟರು. ಮದೀನದಿಂದ ಹೊರಟು ಹೊರಗೆ ಯುದ್ಧ ಮಾಡಬೇಕೇ ಅಥವಾ ಮದೀನದಲ್ಲಿ ಇದ್ದುಕೊಂಡೇ ಇಷ್ಟು ದೊಡ್ಡ ಸೇನೆಯನ್ನು ಎದುರಿಸಬೇಕೇ ಎಂಬುದರ ಬಗ್ಗೆ ಸಮಾಲೋಚನೆ ನಡೆಸಿದರು. ವರದಿಗಳ ಪ್ರಕಾರ ಹಝ್ರತ್ ಸಲ್ಮಾನ್ ಫಾರಸಿ(ರ) ಹೀಗೆ ಸಲಹೆ ನೀಡಿದರು: ನಾವು ಇರಾನಿನಲ್ಲಿ ಕುದುರೆ ಸೇನೆಯ ಎದುರಾಗಿ ಯುದ್ಧ ಮಾಡಲು ಭಯಪಡುವಾಗ ಆಗಮಿಸುವ ಸೇನೆಗೆ ಅಡ್ಡವಾಗಿ ಕಂದಕವನ್ನು ಅಗೆಯುತ್ತಿದ್ದೆವು. ಈ ಸಲಹೆ ಎಲ್ಲರಿಗೂ ಇಷ್ಟವಾಯಿತು. ಹಾಗೆ ಮದೀನದಲ್ಲಿ ಇದ್ದುಕೊಂಡೇ ಸ್ವಯಂರಕ್ಷಣೆ ಮಾಡಿಕೊಳ್ಳಲು ಮತ್ತು ಕಂದಕವನ್ನು ಅಗೆಯಲು ಹಝ್ರತ್ ಪೈಗಂಬರ್(ಸ) ನಿರ್ದೇಶನ ನೀಡಿದರು.

ಕಂದಕವನ್ನು ಅಗೆಯುವ ತೀರ್ಮಾನ ಕೇವಲ ಹಝ್ರತ್ ಸಲ್ಮಾನ್ ಫಾರಸಿ(ರ)ರ ಸಲಹೆಯ ಕಾರಣದಿಂದ ಮಾತ್ರವಾಗಿರಲಿಲ್ಲ, ಬದಲಾಗಿ ಅಲ್ಲಾಹನು ದಿವ್ಯವಾಣಿಯ ಮೂಲಕ ಹಝ್ರತ್ ಪೈಗಂಬರ್(ಸ)ರಿಗೆ ಈ ವಿಧಾನವನ್ನು ತಿಳಿಸಿಕೊಟ್ಟಿದ್ದನು ಎಂದು ಕೆಲವು ಚರಿತ್ರೆಯ ಪುಸ್ತಕಗಳಿಂದ ತಿಳಿದುಬರುತ್ತದೆ. ಏಕೆಂದರೆ ಈ ವಿಧಾನ ಅರೇಬಿಯಾರಿಗೆ ಸಂಪೂರ್ಣವಾಗಿಯೂ ಹೊಸತಾಗಿತ್ತು. ರಕ್ಷಣಾತ್ಮಕ ಕಂದಕಗಳನ್ನು ಅಗೆಯುವ ವಿಧಾನದ ಬಗ್ಗೆ ಅವರಿಗೆ ತಿಳಿದಿರಲಿಲ್ಲ. ಹೀಗಾಗಿ ಅದರ ಬಗ್ಗೆ ಹೀಗೆ ಹೀಗೆ ಬರೆಯಲಾಗಿದೆ, ಅಧಿಕಾರದ ಅಮಲಿನಲ್ಲಿ ಅಬುಸುಫ್ಯಾನ್ ಸೈನ್ಯವನ್ನು ತೆಗೆದುಕೊಂಡು ಮದೀನಾದ ಮೇಲೆ ದಾಳಿ ಮಾಡಿದಾಗ ಮತ್ತು ಮದೀನಾದ ಜನರ ಯಾವುದೇ ಪ್ರತಿರೋಧವನ್ನು ನೋಡದಿದ್ದಾಗ ಮತ್ತು ಯಾವುದೇ ಇಸ್ಲಾಮಿನ ಸೈನ್ಯವನ್ನು ನೋಡದಿದ್ದಾಗ, ಮೊದಲು ಅವನು ತನ್ನ ಬೃಹತ್ ಸೈನ್ಯದಿಂದಾಗಿ ಇಂದು ಮದೀನಾದ ಜನರನ್ನು ಅವರ ಕೈಯಿಂದ ಯಾರಿಂದಲೂ ರಕ್ಷಿಸಲು ಸಾಧ್ಯವಿಲ್ಲ ಎಂದು ಅವನು ಹೆಮ್ಮೆಪಟ್ಟನು. ಅವನು ಹೀಗೆ ಹೇಳಿದನು, ಈಗ ನಾನು ಮದೀನದ ಜನರನ್ನು ಮುಗಿಸಿದ ನಂತರವೇ ಮದೀನಾದಿಂದ ಹೊರಡುತ್ತೇನೆ, ಮತ್ತು ಮದೀನಕ್ಕೆ ಹೋಗುವ ದಾರಿಯಲ್ಲಿ ಎಲ್ಲಿಯೂ ಪ್ರತಿರೋಧ ಕಾಣದಿದ್ದಾಗ, ಅವನು ಇನ್ನಷ್ಟು ಹೆಮ್ಮೆ ಮತ್ತು ಸೊಕ್ಕಿನಲ್ಲಿ ಇನ್ನಷ್ಟು ಹೆಚ್ಚಾದನು, ಆದರೆ ಅವನು ತನ್ನ ಕುದುರೆಗಳನ್ನು ಓಡಿಸುತ್ತಾ ಮದೀನಾವನ್ನು ತಲುಪಿದಾಗ, ಇದ್ದಕ್ಕಿದ್ದಂತೆ, ಐದು ಕಿಲೋಮೀಟರ್ ಉದ್ದವಾದ, ಎಂಟು ಒಂಬತ್ತು ಅಡಿ ಆಳ ಮತ್ತು ಅಗಲವಾದ ಕಂದಕವನ್ನು ನೋಡಿ ಅವನು ಆಶ್ಚರ್ಯಚಕಿತನಾದನು. ಈ ಕಂದಕವು ಎಷ್ಟು ಆಳ ಮತ್ತು ಅಗಲವಾಗಿತ್ತು ಎಂದರೆ ಕುದುರೆಗಳು ಸಹ ಅದನ್ನು ದಾಟಲು ಸಾಧ್ಯವಿರಲಿಲ್ಲ. ಆದ್ದರಿಂದ, ಈ ಜನರು ಈ ಕಂದಕವನ್ನು ದಾಟಲು ಸಾಧ್ಯವಾಗದಿದ್ದಾಗ, ಕೋಪ ಮತ್ತು ಅಸಹಾಯಕತೆ, ಹೆಮ್ಮೆ ಮತ್ತು ದುರಹಂಕಾರದ ಮಿಶ್ರ ಭಾವನೆಗಳಲ್ಲಿ, ಅವನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರಿಗೆ ಹೀಗೆ ಒಂದು ಪತ್ರ ಬರೆದನು: ಉಝ್ಝಾಹ್, ಇಸಾಫ್, ನೈಲಾ ಮತ್ತು ಹುಬಲ್‌ನ ಆಣೆ!! ನಾನು ನನ್ನ ಸೈನ್ಯದೊಂದಿಗೆ ಬಂದಿರುವೆನು ನಿಮ್ಮ ಹೆಸರು ಮತ್ತು ಗುರುತು ಅಳಿಸುವವರೆಗೂ ನಾನು ಹಿಂತಿರುಗುವುದಿಲ್ಲ ಆದರೆ ನೀವು ನಮ್ಮನ್ನು ಎದುರಿಸಲು ಸರಿಯುತ್ತಿರುವುದನ್ನು ನಾನು ನೋಡುತ್ತೇನೆ ಮತ್ತು ನಿಮ್ಮ ಸುತ್ತಲೂ ಕಂದಕಗಳನ್ನು ಅಗೆಯಲಾಗಿದೆ. ಓಹ್, ಈ ವಿಧಾನವನ್ನು ನಿಮಗೆ ಯಾರು ತಿಳಿಸಿರುವರು ಮತ್ತು ನಾವು ಹಿಂದಿರುಗಿ ಹೋದರೂ, ಉಹುದ್ ಯುದ್ಧದ ದಿನವು ನಿಮ್ಮ ಮಹಿಳೆಯರನ್ನು ವಧಿಸುವ ದಿನವನ್ನು ಮತ್ತೊಮ್ಮೆ ನಿಮಗೆ ನೆನಪಿಸುತ್ತದೆ ಎಂಬುದನ್ನು ನೆನಪಿಡಿ. ಅವನು ಈ ಪತ್ರವನ್ನು ಹಝ್ರತ್ ಪೈಗಂಬರ್(ಸ)ರ ಸೇವೆಗೆ ಕಳುಹಿಸಿದರು.

ಈ ಪತ್ರಕ್ಕೆ ಉತ್ತರವಾಗಿ ಹಝ್ರತ್ ಪೈಗಂಬರ್(ಸ) ಅಬೂಸುಫ್‌ಯಾನ್‌ರಿಗೆ ಹೀಗೆ ಬರೆದರು: ನಿಮ್ಮ ಪತ್ರ ಮುಟ್ಟಿದೆ. ನೀವು ಯಾವಾಗಲೂ ಅಲ್ಲಾಹನ ವಿರುದ್ಧ ಅಹಂಕಾರದಲ್ಲಿ ಮುಳುಗಿದ್ದೀರಿ. ದೊಡ್ಡ ಶಕ್ತವಾದ ಸೇನೆಯೊಂದಿಗೆ ನಮ್ಮನ್ನು ನಿರ್ಮೂಲನ ಮಾಡುವುದಕ್ಕಾಗಿ ನೀವು ನಿರ್ಧಾರ ಮಾಡಿರುವುದರ ಬಗ್ಗೆ ನೀವು ಪ್ರಸ್ತಾಪಿಸಿದ್ದೀರಿ. ಅದಕ್ಕೆ ಪ್ರತಿಯಾಗಿ ನಾನು ಮಾಡಿದ್ದು ಅಲ್ಲಾಹನ ಆಜ್ಞೆಯ ಪ್ರಕಾರವಾಗಿದೆ. ಅದು ನಿಮ್ಮ ಕೊಳಕು ನಿರ್ಧಾರದ ಮುಂದೆ ತಡೆಯಾಗಿ ನಿಂತಿತು. ನೀವು ಲಾತ್ ಮತ್ತು ಉಝ್ಝನ ಹೆಸರು ತನಕ ಮರೆಯುವ ರೀತಿಯಲ್ಲಿ ಅಲ್ಲಾಹನು ತನ್ನ ತೀರ್ಮಾನವನ್ನು ಮಾಡುವನು. ಕಂದಕವನ್ನು ಅಗೆಯುವುದರ ಬಗ್ಗೆ ನಿಮಗೆ ಯಾರು ತಿಳಿಸಿದ್ದು ಎಂದು ನೀವು ಕೇಳಿದ್ದೀರಿ. **ಫಿನ್ನಲ್ಲಾಹ ಅಲ್‌ಹಮನೀ ಝಾಲಿಕ** ಅದರ ಬಗ್ಗೆ ಅಲ್ಲಾಹನು ನನಗೆ ದಿವ್ಯವಾಣಿ ಮೂಲಕ ತಿಳಿಸಿದ್ದನು. ನೀವು ಮತ್ತು ನಿಮ್ಮ ಸಂಗಡಿಗರ ಕೋಪವು ಹೆಚ್ಚಾದಾಗ ಅಲ್ಲಾಹನು ನನಗೆ ಇದನ್ನು ತಿಳಿಸಿದನು. ಮತ್ತು ಕೇಳಿರಿ! ಕೊನೆಗೆ ಅಲ್ಲಾಹನು ನಮಗೆ ವಿಜಯವನ್ನು ನೀಡುವನು. ಮತ್ತು ಓ ಪರಾಕ್ರಮಿಗಳ ಮೂರ್ಖರೇ! ನಿಮ್ಮ ಲಾತ್, ಉಝ್ಝಾ, ಇಸಾಫ್, ನೈಲಾ ಮತ್ತು ಹುಬಲ್ ಅನ್ನು ತುಂಡುಗಳಾಗಿ ಕತ್ತರಿಸುವ ದಿನ ಬರುತ್ತದೆ ಮತ್ತು ಆ ದಿನ ನಾನು ನಿಮಗೆ ಎಲ್ಲವನ್ನೂ ನೆನಪಿಸುತ್ತೇನೆ ಎಂದು ನೆನಪಿಡಿ. (ಸಬ್ಲುಲ್ ಹುದಾ, ಸಂಪುಟ-5, ಪುಟ-364, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಖಾತಮ್ ಅಲ್-ನಬಿಯೀನ್, ಅಜಬುಝುಹ್ರಾ, ಸಂಪುಟ-2, ಪುಟ-942, ಅಲ್-ಮುತಮರ್ ಅಲ್-ಆಲಮಿ) (ಅಸ್ಸಹೀಹ್ ಅಲ್-ಅಝ್ಝುಮ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್, ಸಂಪುಟ-10, ಪುಟ-197, ಅಲ್-ಮರ್ಕಝುಲ್ ಇಸ್ಲಾಮಿ ಲಿದ್ದರಾಸಾತ್ ಬೈರುತ್ 2006)

ಹಾಗಾಗಿ ವಿಜಯವು ನಮ್ಮದೇ ಆಗಿರುತ್ತದೆ ಎಂಬುದು ಸ್ಪಷ್ಟವಾಗಿದೆ. ಹಝ್ರತ್ ಸಲ್ಮಾನ್ ಫಾರಸೀ(ರ) ಸಲಹೆ ಕೊಟ್ಟಿರಬಹುದು. ಆದರೆ ಅದನ್ನು ಕಾರ್ಯಗತಗೊಳಿಸುವ ತೀರ್ಮಾನವನ್ನು ಹಝ್ರತ್ ಪೈಗಂಬರ್(ಸ) ದಿವ್ಯವಾಣಿಯ ಮೂಲಕ ಮಾಡಿರಬಹುದು ಎಂದು ಹಝ್ರತ್ ಪೈಗಂಬರ್(ಸ)ರ ಈ ಪತ್ರದಿಂದ ಸ್ಪಷ್ಟವಾಗುತ್ತದೆ. ಅಲ್ಲಾಹು ಅಅ್‌ಲಮು. ಆದಾಗ್ಯೂ, ಅವರ ಸಲಹೆಯೂ ಇತ್ತು, ಆದರೆ ಸರ್ವಶಕ್ತನಾದ ಅಲ್ಲಾಹನು ಅದರ ಬಗ್ಗೆ ಹಝ್ರತ್ ಪೈಗಂಬರ್(ಸ) ಅವರಿಗೆ ತಿಳಿಸಿದನು.

*(ಪುಟ-08ರಲ್ಲಿ ಮುಂದುವರಿಸಲಾಗಿದೆ)*

**ಪುರುಷನು ಮೈತುಂಬ ಬಟ್ಟೆ ಧರಿಸುವವನಾದರೆ well dressed ಅಂದುಕೊಳ್ಳುತ್ತಾನೆ. ಅಂದರೆ ಕೋಟ್ ಧರಿಸಿರಬೇಕು. ಟೈ ಹಾಕಿರಬೇಕು. ಆದರೆ ಹೆಣ್ಣು well dressed ಅಂದುಕೊಳ್ಳಬೇಕಾದರೆ ಅವಳು ಮಿನಿಸ್ಕರ್ಟ್ ಹಾಕಿರಬೇಕು. ಈ ತತ್ವ ನನಗೆ ಅರ್ಥವಾಗಲಿಲ್ಲ.**
**ಸ್ತ್ರೀಯರು ತನ್ನನ್ನು ಬೆತ್ತಲೆ ಮಾಡಿಕೊಳ್ಳುತ್ತಿದ್ದಾರೆ. ತನ್ನನ್ನು ಅಪಮಾನಿಸಿಕೊಳ್ಳುತ್ತಿದ್ದಾರೆ. ಅಹ್ಮದಿ ಹುಡುಗಿಯರು, ಸ್ತ್ರೀಯರು ತಮ್ಮ ಗೌರವ ಘನತೆ ತನ್ನ ಲಜ್ಜೆಯನ್ನು ಕಾಪಾಡಿಕೊಳ್ಳುವುದಲ್ಲಿಯೇ ಇದೆ ಎಂದು ಭಾವಿಸಬೇಕು. ಏಕೆಂದರೆ ಲಜ್ಜೆಯೇ ಕವಚರಕ್ಷೆಯಾಗಿದೆ. ಅದುವೇ ನಮ್ಮನ್ನು ಇತರರ ದೃಷ್ಟಿಯಿಂದ ರಕ್ಷಿಸುತ್ತದೆ.**
**ಸಯ್ಯದ್‌ನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ಅವರೊಡನೆ ಕೇಳಲಾದ ಪ್ರಶ್ನೆಗಳಿಗೆ ವಿವೇಕಯುತ ಉತ್ತರಗಳು.**

**ಸೂಚನೆ:** ಸಯ್ಯದ್‌ನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ವಿಭಿನ್ನ ಸಂದರ್ಭಗಳಲ್ಲಿ ತನ್ನ ಪತ್ರಗಳಲ್ಲಿ ಮತ್ತು MTA ಯ ಕಾರ್ಯಕ್ರಮಗಳಲ್ಲಿ ಮುಖ್ಯ ಸಮಸ್ಯೆಗಳ ಕುರಿತು ನೀಡಿದ ಅಧ್ಯಾಪನೆಗಳಲ್ಲಿ ಕೆಲವು ಓದುಗರ ಹಿತದೃಷ್ಟಿಯಿಂದ ಅಲ್-ಫಝ್ಲ್ International ನ ಕೃಪೆಯಿಂದ ಮುದ್ರಿಸಲಾಗುತ್ತದೆ. (ಸಂಪಾದಕರು)

**ಭಾಗ-1**

**ಪ್ರಶ್ನೆ:** ಮಹಿಳೆಯರು ಮುಟ್ಟಿನ ಅವಧಿಯಲ್ಲಿ ಪವಿತ್ರ ಖುರ್‌ಆನ್‌ನ್ನು ತೆಗೆದುಕೊಳ್ಳಲು ಮತ್ತು ಪಠಿಸಲು ಅಂತೆಯೇ ಕಂಪ್ಯೂಟರ್ ಅಥವಾ I-pad ಇತ್ಯಾದಿ ಮೂಲಕ ಖುರ್‌ಆನ್ ಪಠಿಸುವ ಕುರಿತು ವ್ಯಕ್ತಿಯೊಬ್ಬನು ವಿವಿಧ ಉಲಮಾ, ತತ್ವಜ್ಞಾನಿಗಳ ಪುರಾವೆಗಳನ್ನು ಆಧರಿಸಿ ಒಂದು ಸಂಶೋಧನೆ ಹುಝೂರರ ಸಮ್ಮುಖದಲ್ಲಿ ಪ್ರಸ್ತುತಪಡಿಸಿ ಆ ಸಮಸ್ಯೆಗಳ ಕುರಿತು ಹುಝೂರರಿಂದ ಮಾರ್ಗದರ್ಶನ ಬಯಸಿದರು.

ಹುಝೂರ್ ಅನ್ವರ್(ಅಬಿಅ) ತನ್ನ ಪತ್ರದಲ್ಲಿ ದಿನಾಂಕ: 5 ಅಕ್ಟೋಬರ್ 2018 ರಲ್ಲಿ ಈ ಕೆಳಗಿನ ಉತ್ತರ ನೀಡಿದರು.

**ಉತ್ತರ:** ಈ ಸಮಸ್ಯೆ ಕುರಿತು ಉಲಮಾಅ ಮತ್ತು ಧಾರ್ಮಿಕ ತತ್ವಜ್ಞಾನಿಗಳ ಮಧ್ಯೆ ಭಿನ್ನತೆ ಕಂಡುಬರುತ್ತಿವೆ. ವಿಭಿನ್ನ ಉಲಮಾಅಗಳು ಸಹ ತನ್ನ ಖುರ್‌ಆನ್‌ನ ಜ್ಞಾನ ಅನುಸಾರವಾಗಿ ಈ ಕುರಿತು ವಿಭಿನ್ನ ಸಲಹೆಗಳನ್ನು ನೀಡಿರುತ್ತಾರೆ.

ಪವಿತ್ರ ಖುರ್‌ಆನ್, ಹದೀಸುಗಳು ಮತ್ತು ಹಝ್ರತ್ ಮಸೀಹ್ ಮೌಊದ್(ಅ) ರವರ ಅಧ್ಯಾಪನೆಗಳ ಪ್ರಕಾಶದಲ್ಲಿ ಈ ಕುರಿತು ನನ್ನ ಅಭಿಪ್ರಾಯವೆಂದರೆ, ಮುಟ್ಟಿನ ಅವಧಿಯಲ್ಲಿ ಸ್ತ್ರೀಯರು ತಮಗೆ ಪವಿತ್ರ ಖುರ್‌ಆನ್‌ನ ಎಷ್ಟು ಭಾಗ ಕಂಠಸ್ತವಾಗಿರುತ್ತದೆ. ಅದನ್ನು ಸ್ಮರಣೆ ರೂಪದಲ್ಲಿ ಉಚ್ಚರಿಸಿಕೊಳ್ಳಬಹುದು. ಅಲ್ಲದೇ ಅಗತ್ಯ ಬಿದ್ದಾಗ ಯಾವುದೇ ಸ್ವಚ್ಛ ಬಟ್ಟೆಯಿಂದ ಪವಿತ್ರ ಖುರ್‌ಆನ್‌ನ್ನು ಹಿಡಿಯಬಹುದು. ಯಾರಿಗಾದರೂ ಪುರಾವೆಗಳು ಒದಗಿಸಬೇಕಾದರೆ ಅಥವಾ ಮಕ್ಕಳಿಗೆ ಪವಿತ್ರ ಖುರ್‌ಆನ್ ಬೋಧಿಸಲು ಪವಿತ್ರ ಖುರ್‌ಆನ್‌ನ ಯಾವುದಾದರೂ ಭಾಗ ಪಠಿಸಲೂಬಹುದು. ಆದರೆ ವಿಧಿಬದ್ಧವಾಗಿ ಪಠಿಸಬಾರದು. ಅದೇ ರೀತಿ ಈ ಅವಧಿಯಲ್ಲಿ ಮಹಿಳೆಗೆ ಕಂಪ್ಯೂಟರ್ ಇತ್ಯಾದಿಯ ಮೇಲೆ ಪವಿತ್ರ ಖುರ್‌ಆನ್‌ನ್ನು ಭೌತಿಕವಾಗಿ ಹಿಡಿಯಲಾಗುವುದಿಲ್ಲ. ಆದರೂ ಕ್ರಮಬದ್ಧ ರೀತಿಯಲ್ಲಿ ಪಾರಾಯಣಕ್ಕೆ ಅನುಮತಿ ಇಲ್ಲ. ಆದರೆ ಯಾವುದೇ ಕಾರಣಕ್ಕೆ, ಉದಾಹರಣೆಗೆ ಪುರಾವೆ ಹುಡುಕಬೇಕಾದರೆ ಅಥವಾ ಯಾರಿಗಾದರೂ ಸಾಕ್ಷ್ಯ ಒದಗಿಸಬೇಕಾದಲ್ಲಿ ಕಂಪ್ಯೂಟರ್ ಇತ್ಯಾದಿಯ ಮೂಲಕ ಪವಿತ್ರ ಖುರ್‌ಆನ್‌ನಿಂದ ಪ್ರಯೋಜನ ಪಡೆಯಬಹುದಾಗಿದೆ. ಅದಕ್ಕೇನೂ ಅಡ್ಡಿಯಿಲ್ಲ.

**ಪ್ರಶ್ನೆ:** ಮಹಿಳೆಯೋರ್ವಳು ಮುಟ್ಟಿನ ಅವಸ್ಥೆಯಲ್ಲಿ ಮಸೀದಿಗೆ ಬರುವ ವಿಷಯವಾಗಿ ವಿವಿಧ ಹದೀಸುಗಳು ಹಾಗೂ ಪ್ರಸಕ್ತ ಕಾಲದಲ್ಲಿ ಮಹಿಳೆಯರ ಆ ದಿನಗಳ ಸ್ವಚ್ಛತೆಗೆ ಆಧುನಿಕ ರೀತಿಯ ಸಾಮಗ್ರಿಗಳು ಲಭ್ಯವಿದೆ. ಅದನ್ನು ಹುಝೂರರ ಮುಂದೆ ಪ್ರಸ್ತಾಪಿಸುತ್ತಾ ಮಸೀದಿಯಲ್ಲಿ ನಡೆಯುವ ಜಮಾಅತಿನ ಸಭೆ, ಸಮಾರಂಭ ಮುಂತಾದ ಕಾರ್ಯಕ್ರಮದಲ್ಲಿ ಸ್ತ್ರೀಯರ ಭಾಗವಹಿಸುವಿಕೆಯ ಬಗ್ಗೆ ಮತ್ತು ಅಂತಹ ಅಮುಸ್ಲಿಮ್ ಸ್ತ್ರೀಯರು ಮಸೀದಿಗೆ ಭೇಟಿ ನೀಡುವ ಕುರಿತು ಹುಝೂರ್ ಅನ್ವರ್ ಅವರಿಂದ ಮಾರ್ಗದರ್ಶನ ಪಡೆಯಬಯಸಿದರು. ಆಗ ಹುಝೂರ್ ಅನ್ವರ್ ತನ್ನ ಪತ್ರ ದಿನಾಂಕ: 14 ಮೇ 2020 ರಲ್ಲಿ ನಮೂದಿಸಿದಂತೆ ಈ ಕೆಳಗಿನಂತೆ ಉತ್ತರ ನೀಡಿದರು.

**ಉತ್ತರ:** ಮುಟ್ಟಿನ ಅವಸ್ಥೆಯಲ್ಲಿ ಸ್ತ್ರೀಯರು ಮಸೀದಿಯಿಂದ ಯಾವುದೇ ವಸ್ತು ತರಲು ಅಥವಾ ಮಸೀದಿಗೆ ಯಾರನ್ನಾದರು ಬಿಟ್ಟು ಬರಲು ಅಥವಾ ಮಸೀದಿಗೆ ಹೋಗಿ ಕುಳಿತುಕೊಳ್ಳುವ ವಿಷಯವಾಗಿ ಬೇರೆ ಬೇರೆ ಆಜ್ಞೆಗಳು ನಮಗೆ ಹುಝೂರ್(ಸ) ಸ್ಪಷ್ಟ ರೂಪದಲ್ಲಿ ತಿಳಿಸಿರುತ್ತಾರೆ. ಅಂದ ಹಾಗೆ ನೀವು ನಿಮ್ಮ ಪತ್ರದಲ್ಲೂ ಅದನ್ನು ಪ್ರಸ್ತಾಪಿಸಿದ್ದೀರಿ. ಹುಝೂರ್ (ಸ) ತನ್ನ ಪತ್ನಿಯರಿಗೆ ಈ ಅವಸ್ಥೆಯಲ್ಲಿ ಚಾಪೆ ಇತ್ಯಾದಿ ಮಸೀದಿಗೆ ಹೋಗಿ ಹಾಸಿ ಬರಲು ಅನುಮತಿ ನೀಡುತ್ತಿದ್ದರು. ಆದರೆ ಮಸೀದಿಗೆ ಹೋಗಿ ಕುಳಿತುಕೊಳ್ಳಲು ಹುಝೂರ್ (ಸ) ನಿಷೇಧಿಸಿದರು. ಆ ಬಗ್ಗೆ ಹದೀಸುಗಳಲ್ಲಿ ಉಲ್ಲೇಖಗಳಿವೆ. ಅಂದ ಹಾಗೆ ಅವರು ಹಬ್ಬಗಳ ಸಂದರ್ಭದಲ್ಲಿ ಯಾವ ಹುಡುಗಿಯರಿಗೆ, ಪರದೆ ಕಡ್ಡಾಯ ಮತ್ತು ಮುಟ್ಟಿನ ಅವಸ್ಥೆಯ ಸ್ತ್ರೀಯರನ್ನು ಹೀಗೆ ಎಲ್ಲರನ್ನು ಹಬ್ಬಕ್ಕಾಗಿ (ಈದ್) ಹೋಗಲು ಆಗ್ರಹಪೂರ್ವಕ ನಿರ್ದೇಶನ ನೀಡಿದರು. ತಲೆಯ ಮೇಲೆ ವಸ್ತ್ರವಿಲ್ಲದವರನ್ನೂ ಸಹ ತನ್ನ ಯಾವುದೇ ಸಹೋದರಿಯಿಂದ ವಸ್ತ್ರವನ್ನು ಪಡೆದುಕೊಂಡಾದರೂ ಹೋಗಲು ಆಗ್ರಹಿಸಿದರು. ಆದರೆ ಅದರ ಜೊತೆಯಲ್ಲಿಯೇ ಮುಟ್ಟಿನ ಅವಸ್ಥೆಯ ಸ್ತ್ರೀಯರಿಗೆ ನಮಾಝಿನ ಸ್ಥಳದಿಂದ ಪ್ರತ್ಯೇಕವಾಗಿದ್ದು ದುಆದಲ್ಲಿ ಪಾಲ್ಗೊಳ್ಳಲು ನಿರ್ದೇಶಿಸಿದರು.

ಅದೇ ರೀತಿ ಹಜ್ಜತುಲ್ ವಿದಾ (ಅಂತಿಮ ಹಜ್ಜ್) ಸಂದರ್ಭದಲ್ಲಿ ಹೆಚ್ಚಿನ ಮುಸ್ಲಿಮರು ಉಮ್ರಾಹ್ ಮಾಡುತ್ತಿದ್ದರು. ಹಝ್ರತ್ ಆಯಿಶಾ(ರ) ಮುಟ್ಟಿನ ಅವಸ್ಥೆಯಲ್ಲಿದ್ದರು. ಆದ್ದರಿಂದ ಹುಝೂರ್(ಸ) ಅವರಿಗೆ ಉಮ್ರಾಹ್ ಮಾಡಲು ಅನುಮತಿ ನೀಡಲಿಲ್ಲ. ಏಕೆಂದರೆ ತವಾಫ್ (ಪ್ರದೀಕ್ಷಣೆ) ಮಾಡಲು ಮಸೀದಿಯಲ್ಲಿ ಹೆಚ್ಚಿನ ಸಮಯ ಕಳೆಯಬೇಕಾಗುತ್ತದೆ. ಮತ್ತೆ ಈ ಅವಸ್ಥೆಯಿಂದ ಪಾರಾದಾಗ ಹಜ್ಜ್ ಆದ ನಂತರ ಅವರಿಗೆ ಪ್ರತ್ಯೇಕವಾಗಿ ಉಮ್ರಾಹ್ ಮಾಡಲು ಕಳುಹಿಸಿದರು.

ಆದುದರಿಂದ ಹದೀಸುಗಳಲ್ಲಿ ಇಷ್ಟೆಲ್ಲಾ ಸ್ಪಷ್ಟತೆಯಿರುವಾಗ ನಮ್ಮ ಇಚ್ಛಾನುಸಾರ ನಡೆಯಲು ಯಾವ ಕಾರಣವು ಇಲ್ಲ. ಹೊಸ ಹೊಸ ಮಾರ್ಗಗಳು ಹುಡುಕಬೇಕಾಗಿಲ್ಲ.

ಮೊದಲಿನ ಕಾಲದಲ್ಲಿ ಸ್ತ್ರೀಯರಿಗೆ ಈಗಿರುವಂತೆ ಸ್ವಚ್ಛತೆಯ ಸಾಮಗ್ರಿಗಳು ಇರಲಿಲ್ಲ ಎಂಬ ಪ್ರಶ್ನೆ ಇದೆ. ಸರಿ ಎಂದಾದರೂ ಈ ರೀತಿ ಆಧುನಿಕ ಸಾಮಗ್ರಿಗಳು ಇರಲಿಲ್ಲ ಎಂದ ಮಾತ್ರಕ್ಕೆ ಅವರು ತಮ್ಮ ಸ್ವಚ್ಛತೆ ಕಾಪಾಡುತ್ತಿರಲಿಲ್ಲ ಎಂದಾಗುವುದಿಲ್ಲ. ಆ ದಿನಗಳಲ್ಲಿ ಅವರ ರಕ್ತ ಅಲ್ಲಲ್ಲಿ ಚೆಲ್ಲುತ್ತಿರುತ್ತದೆ ಎಂದೇನಿಲ್ಲ. ಮನುಷ್ಯನು ಎಲ್ಲಾ ಕಾಲದಲ್ಲೂ ತನ್ನ ಅಗತ್ಯಕ್ಕನುಸಾರವಾಗಿ ಒಳ್ಳೆಯ ವ್ಯವಸ್ಥೆ ಮಾಡಿಕೊಳ್ಳಲು ಪ್ರಯತ್ನಿಸಿದ್ದಾನೆ. ಹಾಗೆಯೇ ಮೊದಲಿನ ಕಾಲದಲ್ಲೂ ಸ್ತ್ರೀಯರು ತಮ್ಮ ಸ್ವಚ್ಛತೆಗಾಗಿ ಉತ್ತಮ ಏರ್ಪಾಡು ಮಾಡಿಕೊಳ್ಳುತ್ತಿದ್ದರು.

ಈ ಆಧುನಿಕ ಯುಗದ ಸ್ವಚ್ಛತಾ ಸಾಮಾಗ್ರಿಗಳಲ್ಲೂ ನ್ಯೂನತೆಗಳಿವೆ. ಹೆಚ್ಚಿನ ಪ್ರಮಾಣದಲ್ಲಿ ರಕ್ತಸುರಿಯುವ ಮಹಿಳೆಯರ Pad Leak ಆಗುವ ಕಾರಣ ಕೆಲವೊಮ್ಮೆ ಬಟ್ಟೆಗಳು ಹಾಳಾಗುತ್ತವೆ.

ಆದುದರಿಂದ ಇಸ್ಲಾಂ ಧರ್ಮ ನೀಡಿರುವ ಶಿಕ್ಷಣಗಳು ಸರ್ವಕಾಲಿಕವು ಮತ್ತು ಸರ್ವರಿಗೆ ಒಂದೇ ರೀತಿಯಾಗಿವೆ. ಅದರ ಮೇಲೆ ಎಲ್ಲಾ ಕಾಲಕ್ಕೂ ಅದೇ ರೀತಿಯ ನಡತೆಯಿರುತ್ತದೆ. ಹಝ್ರತ್ ರಸೂಲುಲ್ಲಾಹ್(ಸ) ರವರ ಕಾಲದಲ್ಲೂ ಅದೇ ರೀತಿಯಿತ್ತು.

ಯಾವುದೇ ಸ್ಥಳದಲ್ಲಿ ಏನಾದರೂ ವಿವಶತೆಯಿದ್ದರೆ, ನಮಾಝಿನ ಕೋಣೆ ಹೊರತು ಬೇರೆ ಸ್ಥಳವಿಲ್ಲ. ಆ ಸಂದರ್ಭದಲ್ಲಿ ಅದೇ ಕೋಣೆಯ ಬಾಗಿಲ ಸಮೀಪ ವಿಶೇಷ ರೀತಿಯಲ್ಲಿ ನಮಾಝ್ ನಿರ್ವಹಿಸದ ಸ್ಥಳದಲ್ಲಿ ಅಂತಹ ಸ್ತ್ರೀಯರು ಕುಳಿತುಕೊಳ್ಳಬಹುದಾಗಿದೆ. ಅಥವಾ ಮಸೀದಿಯ ಕೊನೆಯ ಭಾಗದಲ್ಲಿ ಅಂತಹ ಸ್ತ್ರೀಯರನ್ನು ಕುರ್ಚಿಗಳು ಹಾಯಿಸಿ ಅವರಿಗೆ ಕುಳಿತುಕೊಳ್ಳುವ ವ್ಯವಸ್ಥೆ ಮಾಡಬಹುದಾಗಿದೆ. ಏಕೆಂದರೆ ನಮಾಝ್ ನಿರ್ವಹಿಸುವ ಜಾಗವು ಹೊಲಸಾಗುವಂತಹ ಪ್ರಸಂಗ ಬರಬಾರದು.

ಅಮುಸ್ಲಿಮರು ಮಸೀದಿಗೆ ಭೇಟಿ ನೀಡುವ ವಿಷಯದಲ್ಲಿ. ಮೊದಲಂತೂ ಭೇಟಿಯು ನಡುವೆ ಅವರಿಗೆ ಮಸೀದಿಯಲ್ಲಿ ಕುಳಿತುಕೊಳ್ಳಲಾಗುವುದಿಲ್ಲ, ಬದಲು ಕೇವಲ ಮಸೀದಿಯನ್ನು ತೋರಿಸಲಾಗುತ್ತದೆ. ಅದರ ಒಟ್ಟು ಸಮಯ ಮಸೀದಿಗೆ ಹೋಗಿ ಚಾಪೆ ತರುವ ಅಥವಾ ಹಾಸಿ ಬರುವಷ್ಟೇ ಇರುತ್ತದೆ. ಆದರೆ ಅವರಿಗೆ ಮಸೀದಿಯಲ್ಲಿ

ಕುಳಿತುಕೊಳ್ಳುವ ಅವಶ್ಯಕತೆ ಬಿದ್ದರೆ ನಮಾಝ್ ನಿರ್ವಹಿಸುವ ಜಾಗ ಬಿಟ್ಟು ಮಸೀದಿಯ ಕೊನೆಯ ಭಾಗದಲ್ಲಿ ಕುರ್ಚಿಗಳಲ್ಲಿ ಕುಳ್ಳಿರಿಸಬಹುದು.

**ಪ್ರಶ್ನೆ:** ಮಿತ್ರರೊಬ್ಬರು ಕೇಳಿದರು. ದಾರುಖುತನಿಯಲ್ಲಿ ಒಂದು ಹದೀಸಿದೆ. ಹುಝೂರ್(ಸ) ಈದ್ ನಮಾಝ್ ನಂತರ ಹೇಳಿದರು. ನಾವು ಖುತುಬ ನೀಡುವೆವು. ಆಲಿಸಬಯಸುವವರು ಕುಳಿತುಕೊಳ್ಳಬಹುದು, ಹೋಗಬಯಸುವವರು ಹೋಗಬಹುದು, ಈ ಹದೀಸು ಸರಿಯೇ? ಆಗ ಹುಝೂರ್ ಅನ್ವರ್ ತನ್ನ ಪತ್ರ ದಿನಾಂಕ 20 ಅಕ್ಟೋಬರ್ 2020 ರಲ್ಲಿ ಈ ಕೆಳಗಿನಂತೆ ಉತ್ತರ ನೀಡಿದರು.

**ಉತ್ತರ:** ಖುತುಬ ಈದ್ ಆಲಿಸುವ ರಿಯಾಯಿತಿಯ ಕುರಿತು ನೀವು ದಾರ್‌ಖುತುನಿಯ ಆಧಾರ ತಮ್ಮ ಪತ್ರದಲ್ಲಿ ನೀಡಿದ್ದೀರಿ. ಸುನನ್ ಅಬಿ ದಾವೂದ್‌ನಲ್ಲೂ ಆ ವರದಿ ಇದೆ.

ಈ ಮಾತು ಸರಿಯಾಗಿದೆ. ಹುಝೂರ್(ಸ) ಈದ್ ಖುತುಬ ಆಲಿಸಲು, ಜುಮುಅ ಖುತುಬ ಆಲಿಸುವಷ್ಟು ತಾಕೀತು, ಮೌನವಹಿಸಿ ಆಲಿಸಲು ಮಾಡಿರುವ ತಾಕೀತಿನಂತೆ ಆಗ್ರಹಪಡಿಸಲಿಲ್ಲ. ಅದನ್ನೇ ಆಧಾರವಾಗಿಟ್ಟುಕೊಂಡು ಉಲಮಾಅ, ತತ್ವವಾದಿಗಳು ಈದ್ ಖುತುಬ ಆಲಿಸುವುದು ಸುನ್ನತ್ ಮತ್ತು ಮುಸ್ತಹಬ್ ಎಂದಿದ್ದಾರೆ. ಆದರೆ ಅದರ ಜೊತೆಯಲ್ಲಿ ಈ ಮಾತು ನೆನಪಿಡಬೇಕು. ಹುಝೂರ್(ಸ) ಈದ್‌ಗೋಸ್ಕರ ಹೋಗಲು ಮತ್ತು ಮುಸ್ಲಿಮರ ದುಆಗಳಲ್ಲಿ ಪಾಲ್ಗೊಳ್ಳುವುದು ಪುಣ್ಯ ಮತ್ತು ಅನುಗ್ರಹದಾಯಕವಾಗಿದೆ ಎಂದರು. ಮತ್ತು ಅದನ್ನು ಎಷ್ಟರಮಟ್ಟಿಗೆ ತಾಕೀತುಪಡಿಸಿದರೆಂದರೆ, ಶಿರವಸ್ತ್ರ ಇಲ್ಲದ ಸ್ತ್ರೀಯೊಬ್ಬಳನ್ನು ಅನ್ಯ ಸಹೋದರಿಯೊಬ್ಬರಿಂದ ಬೇಡಿಕೊಂಡಾದರೂ ಪಡೆದು ಈದ್‌ಗೋಸ್ಕರ ಹೋಗಲು ಪ್ರೇರೇಪಿಸಿದ್ದಾರೆ. ಮುಟ್ಟಿನ ಅವಸ್ಥೆಯ ಸ್ತ್ರೀಯರನ್ನು ಸಹ ಈದ್‌ಗೋಸ್ಕರ ಹೋಗಲು ನಿರ್ದೇಶನ ನೀಡಿದ್ದಾರೆ. ಅವರು ನಮಾಝ್ ಸ್ಥಳದಿಂದ ಪ್ರತ್ಯೇಕವಾಗಿದ್ದು, ದುಆನಲ್ಲಿ ಪಾಲ್ಗೊಳ್ಳಲು ತಾಕೀತು ಮಾಡಿರುತ್ತಾರೆ.

**ಪ್ರಶ್ನೆ:** ಮಹಿಳೆಯೊಬ್ಬಳು ಪವಿತ್ರ ರಂಝಾನ್‌ನಲ್ಲಿ ಇಹ್‌ತಿಕಾಫ್ ಕುರಿತು ಪ್ರಸ್ತಾಪಿಸಿದರು. ಇಹ್‌ತಿಕಾಫ್ ಮನೆಯಲ್ಲಿ ಮಾಡಬಹುದೇ? ಮತ್ತು ಇಹ್‌ತಿಕಾಫ್ ಮೂರು ದಿನಗಳವರೆಗೆ ಆಗಬಹುದೇ?

ಹುಝೂರ್(ಅಬಿಅ) ತನ್ನ ಪತ್ರ ದಿನಾಂಕ: 9 ಆಗಸ್ಟ್ 2015 ರಲ್ಲಿ ಈ ಸಮಸ್ಯೆಗೆ ಈ ಕೆಳಗಿನ ಉತ್ತರ ನೀಡಿದರು.

**ಉತ್ತರ:** ಎಲ್ಲಿಯವರೆಗೆ ರಂಝಾನ್‌ನಲ್ಲಿ ಅಧಿಕೃತ ನೆಲೆಯ ಇಹ್‌ತಿಕಾಫಿನ ಪ್ರಶ್ನೆ ಇದೆ. ಖುರ್‌ಆನ್ ಹದೀಸುಗಳಿಂದ ಸಾಬೀತಾಗಿದೆ. ಮನೆಯಲ್ಲಿ ಹಾಗೂ ಮೂರು ದಿನಗಳಿಗಾಗಿ ಆಗುವುದಿಲ್ಲ. ಹಝ್‌ರತ್ ರಸೂಲುಲ್ಲಾಹ್(ಸ) ರವರ ಸುನ್ನತ್‌ನಿಂದ ಸಾಬೀತಾಗಿದೆ. ಹುಝೂರ್(ಸ) ಪವಿತ್ರ ರಂಝಾನ್‌ನಲ್ಲಿ ಕನಿಷ್ಠ ಹತ್ತು ದಿನಗಳಿಗಾಗಿ ಮಸೀದಿಯಲ್ಲಿ ಇಹ್‌ತಿಕಾಫ್ ಮಾಡುತ್ತಿದ್ದರು. ಅಂದ ಹಾಗೆ ಹದೀಸಿನಲ್ಲಿ ಬರುತ್ತದೆ.

ಅನುವಾದ: ಹಝ್‌ರತ್ ಆಯಿಶಾ(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ತನ್ನ ವಫಾತ್ ಆಗುವವರೆಗೆ ರಂಝಾನ್‌ನ ಕೊನೆಯ ಹತ್ತು ದಿನಗಳಲ್ಲಿ ಇಹ್‌ತಿಕಾಫ್ ಮಾಡುತ್ತಿದ್ದರು. (ಸಹೀ ಬುಖಾರಿ, ಕಿತಾಬುಲ್ ಎತಿಕಾಫ್)

ಅದೇ ರೀತಿ ಪವಿತ್ರ ಖುರ್‌ಆನ್‌ನಲ್ಲಿ ರಂಝಾನಿನ ಸಮಸ್ಯೆಗಳ ಬಗ್ಗೆ ವಿವರವಿದ್ದಲ್ಲಿ ಇತಿಕಾಫ್ ಬಗ್ಗೆಯೂ ವಿವರವಿದೆ.

**"ವಲಾ ತುಬಾಶಿರುಹುನ್ನ ವ ಅಂತುಮ್ ಆಕಿಫೂನ ಫಿಲ್ ಮಸಾಜಿದ್"** (ಅಲ್-ಬಖರ-188) ಮೊದಲನೆಯದಾಗಿ ರಂಝಾನ್‌ನಲ್ಲಿ ಪತಿ ಪತ್ನಿಯರಿಗೆ ಸಂಸರ್ಗ ಮಾಡುವ ಅನುಮತಿ ಇಲ್ಲ. ಎರಡನೆಯದಾಗಿ ಇಹ್‌ತಿಕಾಫ್ ಮಸೀದಿಯಲ್ಲೆ ಮಾಡುವ ಆಜ್ಞೆಯಿದೆ.

ಹದೀಸುಗಳಲ್ಲಿ ಇಹ್‌ತಿಕಾಫ್ ಮಸೀದಿಯಲ್ಲಿಯೇ ನಿರ್ವಹಿಸುವ ಉಲ್ಲೇಖಗಳಿವೆ. ಅಂದ ಹಾಗೆ ಹಝ್‌ರತ್ ಆಯಿಶಾ(ರ) ವರದಿ ಮಾಡುತ್ತಾರೆ. ಅನುವಾದ: ಇಹ್‌ತಿಕಾಫ್ ಕುಳಿತವನು ರೋಗಿಯ ನೋಡಲು ಹೋಗಬಾರದು, ಶವಯಾತ್ರೆಯಲ್ಲಿ ಪಾಲ್ಗೊಳ್ಳಬಾರದು, ತನ್ನ ಪತ್ನಿಯೊಂದಿಗೆ ಸಂಸಾರ ಮಾಡಬಾರದು. ತೀರ ಅಗತ್ಯ ಕಾರಣ ಹೊರತುಪಡಿಸಿ ಮಸೀದಿಯಿಂದ ಹೊರಗೆ ಹೋಗಕೂಡದು. ಉಪವಾಸವಿಲ್ಲದೆ ಇಹ್‌ತಿಕಾಫ್ ಇರ್ವಹಿಸುವುದು ಸರಿಯಲ್ಲ, ಜುಮುಅ ಮಸೀದಿ ಅಲ್ಲದೇ ಬೇರೆ ಸ್ಥಳಗಳಲ್ಲಿ ಇಹ್‌ತಿಕಾಫ್ ಸರಿಯಲ್ಲ.(ಸುನನ್ ಅಬಿ ದಾಊದ್, ಕಿತಾಬುಸ್ಸೌಮ್)

ಅಂದ ಹಾಗೆ ಪವಿತ್ರ ಖುರ್‌ಆನ್ ಮತ್ತು ಹದೀಸುಗಳನ್ವಯ ಪವಿತ್ರ ರಂಝಾನ್‌ನಲ್ಲಿ ಇಹ್‌ತಿಕಾಫ್ ಕನಿಷ್ಠ ಹತ್ತು ದಿನಗಳದ್ದಾಗಿರುತ್ತದೆ ಮತ್ತು ಮಸೀದಿಯಲ್ಲಿಯೇ ಕುಳಿತುಕೊಳ್ಳಬಹುದಾಗಿದೆ.

ಹೌದು ರಂಝಾನ್ ಹೊರತುಪಡಿಸಿದ ಸಾಮಾನ್ಯ ದಿನಗಳಲ್ಲಿ ಪುಣ್ಯ ಪ್ರಾಪ್ತಿಗಾಗಿ ಯಾರಾದರೂ ತಮ್ಮ ಮನೆಯಲ್ಲಿ ಕೆಲ ದಿನಗಳರೆಗೆ ಇಹ್‌ತಿಕಾಫ್ ಮಾಡಬಯಸುವುದಾದರೆ ಅದಕ್ಕೆ ಅನುಮತಿ ಇದೆ. ಆ ಬಗ್ಗೆ ಎಲ್ಲಿಯೂ ನಿಷೇಧ ಕಂಡುಬಂದಿಲ್ಲ. ಅದಲ್ಲದೆ ಕೆಲ ಧಾರ್ಮಿಕ ತತ್ವಜ್ಞಾನಿಗಳು ಸ್ತ್ರೀಯರಿಗೆ ಮನೆಯಲ್ಲಿಯೇ ಇಹ್‌ತಿಕಾಫ್ ಮಾಡುವುದು ಉತ್ತಮ ಎಂದಿದ್ದಾರೆ. ಅಂದ ಹಾಗೆ ಫಿಖಾದ ಪ್ರಸಿದ್ಧ ಗ್ರಂಥವಾದ ಹದಾಯಿನಲ್ಲಿ ಬರೆಯಲಾಗಿದೆ.

ಅಂದರೆ ಸ್ತ್ರೀಯು ತನ್ನ ಮನೆಯಲ್ಲಿಯೇ ನಮಾಝ್ ನಿರ್ವಹಿಸುವ ಸ್ಥಳದಲ್ಲಿ ಇತಿಕಾಫ್ ಮಾಡಬಹುದಾಗಿದೆ.

ಸಯ್ಯದ್‌ನಾ ಹಝ್‌ರತ್ ಮುಸ್ಲಿಹ್ ಮೌಊದ್(ರ) ಈ ಕುರಿತು ಹೇಳುತ್ತಾರೆ. ಮಸೀದಿಯ ಹೊರತು ಇಹ್‌ತಿಕಾಫ್ ಮಾಡಬಹುದು. ಆದರೆ ಮಸೀದಿ ರೀತಿಯ ಪುಣ್ಯ ದೊರೆಯುವುದಿಲ್ಲ. ದಿನಪತ್ರಿಕೆ ಅಲ್-ಫಝ್ಲ್ 6 ಮಾರ್ಚ್ 1996).

**ಪ್ರಶ್ನೆ:** ಗುಲ್ಶನ್ ವಖ್ಫೆ ನೌ ಆಸ್ಟ್ರೇಲಿಯಾ ದಿನಾಂಕ: 12 ಅಕ್ಟೋಬರ್ 2013 ರಲ್ಲಿ ಓರ್ವ ಬಾಲಕಿ ಹುಝೂರ್ ಅನ್ವರ್ (ಅಬಿಅ) ಅವರೊಂದಿಗೆ ಪ್ರಶ್ನೆ ಕೇಳಿದಳು. ಬಾಲಕಿಯರಿಗೆ ಯಾವ ವಯಸ್ಸಿನಲ್ಲಿ ಸ್ಕಾರ್ಫ್ ತೆಗೆದುಕೊಳ್ಳಬೇಕು? ಹುಝೂರ್ ಅನ್ವರ್ ಅದಕ್ಕೆ ಉತ್ತರ ನೀಡುತ್ತಾ ಹೇಳಿದರು.

**ಉತ್ತರ:** ನೀವು ಐದು ವರ್ಷದವರಾದರೆ Leggings ಇಲ್ಲದ, ಅಂದರೆ ಅರ್ಧ ಪ್ರಮಾಣದ ಫ್ರಾಕ್ ಧರಿಸಬಾರದು. ನಿಮ್ಮ ಕಾಲುಗಳು ಮುಚ್ಚಿರಬೇಕು. ಏಕೆಂದರೆ ನಿಧಾನವಾಗಿ ನಮ್ಮ ವೇಷಭೂಷಣ (dress) ಪೂರ್ಣ ಪ್ರಮಾಣದ್ದಿರಬೇಕು ಎಂಬ ಭಾವನೆ ಬರಬೇಕಾಗಿದೆ. Sleeveless ಬಟ್ಟೆ ಧರಿಸಬಾರದು. ಮತ್ತೆ 6, 7 ವರ್ಷದವರಾದರೆ Leggings ಪೈಕಿ ಇನ್ನು ಹೆಚ್ಚಿನ ಜಾಗೃತೆ ವಹಿಸಬೇಕು. ಮತ್ತೆ ನೀವು ಹತ್ತು ವರ್ಷದವರಾದರೆ ಸ್ಕಾರ್ಫ್ ತೆಗೆದುಕೊಳ್ಳುವ ಅಭ್ಯಾಸ ಮಾಡಬೇಕು. ಮತ್ತೆ ಹನ್ನೊಂದು ವರ್ಷದವರಾದರೆ ಪೂರ್ಣರೂಪದಲ್ಲಿ ಸ್ಕಾರ್ಫ್ ತೆಗೆದುಕೊಳ್ಳಬೇಕು. ಸ್ಕಾರ್ಫ್ ತೆಗೆದುಕೊಳ್ಳುವುದರಲ್ಲಿ ಅಡ್ಡಿಯೇನಿದೆ? ಚಳಿಗಾಲದಲ್ಲಿ ಇಲ್ಲೂ ಜನರು ಸ್ಕಾರ್ಫ್ ಹಾಕಿಕೊಳ್ಳುತ್ತಾರೆ. ಚಳಿ, ಆದರೆ ತನ್ನ ಕಿವಿಗಳನ್ನು ಮುಚ್ಚಿಕೊಳ್ಳುವುದಿಲ್ಲವೇ? ಅದು ಸ್ಕಾರ್ಫ್ ಆಗಿದೆ. ಅದೇ ರೀತಿಯ ಸ್ಕಾರ್ಫ್ ತೆಗೆದುಕೊಳ್ಳಿ. ಕೆಲ ಬಾಲಕಿಯರಿರುತ್ತಾರೆ. ಅವರು ಹತ್ತು ವರ್ಷದ ವಯಸ್ಸಿನಲ್ಲೂ ಸಣ್ಣವರಾಗಿಯೇ ಕಾಣುತ್ತಾರೆ, ಮತ್ತು ಕೆಲವರು ಹತ್ತು ವರ್ಷ ವಯಸ್ಸಿನಲ್ಲಿಯೇ ಹನ್ನೆರಡು ವರ್ಷದವರ ಹಾಗೆ ಕಾಣುತ್ತಾರೆ. ಅವರ ಉದ್ದ ಹೆಚ್ಚಾಗಿರುತ್ತದೆ. ಎಲ್ಲಾ ಹುಡುಗಿಯರು ನೋಡಿಕೊಳ್ಳಬೇಕು. ಅವರು ದೊಡ್ಡವರಾಗಿ ಕಂಡರೆ ಸ್ಕಾರ್ಫ್ ತೆಗೆದುಕೊಳ್ಳಬೇಕು. ಸಣ್ಣ ವಯಸ್ಸಿನಲ್ಲಿಯೇ ಸ್ಕಾರ್ಫ್ ತೆಗೆದುಕೊಳ್ಳುವ ಅಭ್ಯಾಸ ಮಾಡಿಕೊಂಡರೆ ಮತ್ತು ನಾಚಿಕೆ ಆಗುವುದಿಲ್ಲ. ಇಲ್ಲವಾದರೆ ವಯಸ್ಸು ಪೂರ್ತಿ ನಾಚಿಕೆ ಪಡುತ್ತಿರಬೇಕಾಗುತ್ತದೆ. ನೀವು ಅಂದುಕೊಳ್ಳಬಹುದು. 12ನೇ ವಯಸ್ಸಿನಲ್ಲಿ, 13ನೇ ವಯಸ್ಸಿನಲ್ಲಿ, ಹದಿನಾಲ್ಕನೆ ವಯಸ್ಸಿನಲ್ಲಿ ಹೋಗಿ ಸ್ಕಾರ್ಫ್ ತೆಗೆದುಕೊಳ್ಳಬಹುದು ಎಂದು, ಮತ್ತೆ ಯೋಚಿಸುತ್ತಿದ್ದರೆ ನಿಮಗೆ ನಾಚಿಕೆ ಬರುವುದು, ಮತ್ತು ಅನಿಸಿಕೊಳ್ಳುವುದು, ಈಗ ಸ್ಕಾರ್ಫ್ ತೆಗೆದುಕೊಂಡರೆ ಹುಡುಗಿಯರು ತಮಾಷೆ ಮಾಡಬಹುದು ಎಂದು. ನಾನು ಸ್ಕಾರ್ಫ್ ತೆಗೆದುಕೊಂಡರೆ ನನ್ನ ಮೇಲೆ ನಗುವರು. ಆದುದರಿಂದ ಒಮ್ಮೊಮ್ಮೆ ಸ್ಕಾರ್ಫ್ ತೆಗೆದುಕೊಳ್ಳುವ ಅಭ್ಯಾಸ ಮಾಡಿಕೊಳ್ಳಬೇಕು. 7,8,9 ವರ್ಷದ ವಯಸ್ಸಿನಲ್ಲಿ ಸ್ಕಾರ್ಫ್ ತೆಗೆದುಕೊಳ್ಳುವ ಅಭ್ಯಾಸ ಪ್ರಾರಂಭಿಸಬೇಕು. ಹುಡುಗಿಯರ ಮುಂದೆಯೂ ತೆಗೆದುಕೊಳ್ಳಬೇಕು. ಆಗ ನಿಮ್ಮಲ್ಲಿ ನಾಚಿಕೆಯ ಭಾವನೆ ಇರದು. ನೀವು ದೊಡ್ಡವರಾಗಿ ಕಾಣುವಾಗ ಪೂರ್ಣ ಪ್ರಮಾಣದ ಸ್ಕಾರ್ಫ್ ತೆಗೆದುಕೊಳ್ಳಬೇಕು. ಸರಿ ಅಲ್ವಾ, ತಿಳಿಯಿತಾ? ನಿಮಗೆ ಇಷ್ಟು ಸಾಕು ಮತ್ತು ದೊಡ್ಡ ಹುಡುಗಿಯರಿಗೆ ಇಷ್ಟು ಸಾಕು. ಪರದೆಯ ನಿಜವಾದ ಉದ್ದೇಶ ಲಜ್ಜೆ ಆಗಿದೆ. ಇದೀಗ ಯೂರೋಪಿಯನ್ ಇದ್ದಾರೆ. ಅಥವಾ Western Influence ಒಳಗೆ ಬರುತ್ತಾರೆ. ಹಳೆಯ ಕಾಲದಲ್ಲಿ ಅವರ ವಸ್ತ್ರಗಳು ಸಹ ಇಲ್ಲಿಯವರೆಗೆ ಇರುತ್ತಿದ್ದವು. (ಆ ಸಂದರ್ಭದಲ್ಲಿ ಹುಝೂರ್ ತನ್ನ ಕೈಗಳ ಪಂಜೆಯತನಕ ಸಂಕೇತಿಸಿ ಹೇಳಿದರು) ಉದ್ದದ ಮ್ಯಾಕ್ಸಿ, ಫ್ರಾಕ್ಸ್ ಇರುತ್ತಿದ್ದವು. ಈಗ ನೋಡಿ ಬೆತ್ತಲೆಯಾಗಿ ತಿರುಗುತ್ತಿದ್ದಾರೆ ಅಲ್ವಾ?

ಪ್ರಶ್ನೆಯಿರುವುದು ಇಲ್ಲಿ, ಪುರುಷರು Well dressed ಅಂದರೆ ಅವರು ಪೂರ್ಣ ಪ್ರಮಾಣದ ಬಟ್ಟೆ ಧರಿಸಿರಬೇಕು. ಕೋಟ್ ಧರಿಸಿರಬೇಕು. ಟೈ ಹಾಕಿರಬೇಕು. ಸ್ತ್ರೀಯರ Well dressed ಅಂದರೆ ಅವರು ಮಿನಿ ಸ್ಕರ್ಟ್ ಧರಿಸಿರಬೇಕು. ಈ ತತ್ವ ನನಗೆ ಅರ್ಥವಾಗಲಿಲ್ಲ.

ಆದುದರಿಂದ ಪುರುಷರಿಗೆ ನೋಡಬೇಡಿ. ಸ್ತ್ರೀಯರು ತನ್ನನ್ನು ತಾನು ಬೆತ್ತಲೆಯಾಗಿಸುತ್ತಿದ್ದಾರೆ. ಸ್ವಯಂ ತನಗೆ ಅಪಮಾನ ಮಾಡಿಕೊಳ್ಳುತ್ತಿದ್ದಾರೆ. ಆದುದರಿಂದ ಅಹ್ಮದಿ ಹುಡುಗಿ, ಅಹ್ಮದಿ ಸ್ತ್ರೀಯ ಗೌರವ ಘನತೆ ತನ್ನ ಲಜ್ಜೆ ಕಾಪಾಡುವುದರಲ್ಲಿಯೇ ಇದೆ. ಏಕೆಂದರೆ ಲಜ್ಜೆಯೇ ನಿಜವಾದ ವಸ್ತುವಾಗಿದೆ. ಲಜ್ಜೆಯೇ ನಿಮ್ಮ ಮೇಲೆ ಇತರರ ದೃಷ್ಟಿ ಬೀಳದಂತೆ ಮಾಡುತ್ತಿದೆ.

**ಪ್ರಶ್ನೆ:** ಆಸ್ಟ್ರೇಲಿಯಾದ ವಾಖಿಫಾತ್ ಸಾವಿನ ಅದೇ ಕಾರ್ಯಕ್ರಮ ಗುಲ್ಶನೆ ವಕ್ಫೆ ನೌ ದಿನಾಂಕ: 12 ಅಕ್ಟೋಬರ್ 2013 ರಲ್ಲಿ ಓರ್ವ ಬಾಲಕಿ ಹುಝೂರ್‌ರ ಸೇವೆಯಲ್ಲಿ ಪ್ರಶ್ನೆ ಮಾಡಿದಳು. ರಂಝಾನಿನಲ್ಲಿ ಆವು ಯಾವ ವಯಸ್ಸಿನಲ್ಲಿ ಉಪವಾಸ ಪ್ರಾರಂಭಿಸಬೇಕು? ಈ ಪ್ರಶ್ನೆ ಉತ್ತರ ನೀಡುತ್ತಾ ಅವರು ಹೇಳಿದರು.

**ಉತ್ತರ:** ನಿಮ್ಮ ಪ್ರಕಾರ ರೂಪದಲ್ಲಿ ಪ್ರೌಢಾವಸ್ಥೆಗೆ ಬಂದಾಗ ನಿಮಗೆ ಉಪವಾಸ ಕಡ್ಡಾಯವಾಗುತ್ತದೆ. ನೀವು ವಿದ್ಯಾರ್ಥಿಯಾಗಿದ್ದರೆ, ನಿಮ್ಮ ಪರೀಕ್ಷೆಗಳು ನಡೆಯುತ್ತಿದ್ದರೆ ಆ ದಿನಗಳಲ್ಲಿ ನಿಮ್ಮ ವಯಸ್ಸು 13, 14, 15 ವರ್ಷಗಳಾಗಿದ್ದರೆ ನೀವು ಉಪವಾಸ ನಿರ್ವಹಿಸುವುದು ಬೇಡ, ನಿಮ್ಮಲ್ಲಿ ಸಹಿಸುವ ಶಕ್ತಿ ಇದ್ದರೆ 15 ವರ್ಷದ ವಯಸ್ಸಿನಲ್ಲಿ ಉಪವಾಸ ಇಡಬಹುದು. ಆದರೆ ಸಾಮಾನ್ಯವಾಗಿ ಉಪವಾಸವು 17, 18 ವರ್ಷಗಳ ಮೇಲೆ ಕಡ್ಡಾಯವಾಗುತ್ತದೆ. ಆನಂತರ ಉಪವಾಸ ಇಡಲೇಬೇಕಾಗಿದೆ. 8, 10 ವರ್ಷದ ವಯಸ್ಸಿನಲ್ಲಿ 3, 4, ಉಪವಾಸಗಳು ಐಚ್ಛಿಕವಾಗಿ ಇರಬಯಸುವುದಾದರೆ ಇರಬಹುದು. ಆದರೆ ಕಡ್ಡಾಯವೇನಲ್ಲ. ನೀವು ಪ್ರೌಢಾವಸ್ಥೆಗೆ ಬಂದಾಗ, ಶಕ್ತಿಬಂದಾಗ ನಿಮಗೆ ಉಪವಾಸ ಕಡ್ಡಾಯವಾಗಿರುವುದು, ಇಲ್ಲಿ (ಆಸ್ಟ್ರೇಲಿಯಾದಲ್ಲಿ ಲೇಖಕರು) ವಿವಿಧ ಋತುಗಳಲ್ಲಿ ಎಷ್ಟು ವ್ಯತ್ಯಾಸವಿರುತ್ತದೆ. Day night ಎಷ್ಟು ಗಂಟೆಯದ್ದಾಗಿರುತ್ತದೆ? ಹೌದು ನೀವು 19 ಗಂಟೆ ಹಸಿವಿನಿಂದ ಇರಲಾರಿರಿ. ಯು.ಕೆ ಯಲ್ಲೂ ಸಹ ಇಂದು. ಹಿಂದೆ ಕಳೆದ ಶಕೆಗಾಲದ ನಿಮ್ಮ ಉಪವಾಸ ಸಣ್ಣವಾಗಿದ್ದವು ಮತ್ತು ಅಲ್ಲಿ ದೀರ್ಘವಾಗಿದ್ದವು. 18 ವರೆ ಸ್ಥಳಗಳಲ್ಲೂ 22 ಗಂಟೆಗಳ ಉಪವಾಸವಿರುತ್ತದೆ. ಅಂತೂ ಅಲ್ಲಿ ಸಮಯವನ್ನು Adjust ಮಾಡಬೇಕಾಗುತ್ತದೆ. ಏಕೆಂದರೆ ಅಷ್ಟೊಂದು ದೀರ್ಘ ಸಮಯದ ಉಪವಾಸ ಇರಲಾಗದು. ಆದರೆ ಸಹನೆ ಶಕ್ತಿ ಬರುವುದು ಪ್ರೌಢಾವಸ್ಥೆಗೆ ಬಂದಾಗ, ಕನಿಷ್ಠ 17, 18 ವರ್ಷದವರಾದರೆ ಸರಿ. ಉಪವಾಸ ಮಾಡಬಹುದು. ತಿಳಿಯಿತಾ? ನಿಮ್ಮ ತಂದೆ ತಾಯಿಯರು ಏನು ಹೇಳುತ್ತಾರೆ? ಹತ್ತು ವರ್ಷದಲ್ಲಿ ಕಡ್ಡಾಯವಾಗಿದೆ ಎಂದು ಹೇಳುತ್ತಾರೆಯೇ? ಆದರೆ ಅಭ್ಯಾಸ ಮಾಡಿಕೊಳ್ಳಿ. ಸಣ್ಣ ಮಕ್ಕಳಿಗೆ ಸಹ 2, 3 ಉಪವಾಸ ರಂಝಾನ್‌ನಲ್ಲಿ ಇರಬಹುದಾಗಿದೆ. ಏಕೆಂದರೆ ರಂಝಾನ್ ಬಂದಿದೆ ಎಂದು ಅರಿವಾಗಬೇಕು. ಆದರೆ ಉಪವಾಸ ಇರದಿದ್ದರೂ ಬೆಳಿಗ್ಗೆ ಬೇಗ ಏಳಿರಿ. ತಂದೆ ತಾಯಿಯರ ಜೊತೆ ಸೆಹರಿ ಮಾಡಿರಿ. ನಫಲ್ ನಿರ್ವಹಿಸಿರಿ. ನಮಾಝ್‌ಗಳನ್ನು ವಿಧಿಬದ್ಧವಾಗಿ ನಿರ್ವಹಿಸಿರಿ, ನಿಮ್ಮ ಅಂದರೆ ವಿದ್ಯಾರ್ಥಿಗಳ ಮತ್ತು ಮಕ್ಕಳ ರಂಝಾನ್ ಎಂದರೆ ಏಳಬೇಕು, ಸೆಹರಿ ಉಣ್ಣಬೇಕು, ಅದರ ಮುಂಚೆ ಎರಡು ಅಥವಾ ನಾಲ್ಕು ನಫಲ್ ಅನುಷ್ಠಿಸಬೇಕು, ಮತ್ತೆ ನಮಾಝ್‌ಗಳನ್ನು ವಿಧಿಬದ್ಧವಾಗಿ ನಿರ್ವಹಿಸಬೇಕು, ಪವಿತ್ರ ಖುರ್‌ಆನ್ ಕ್ರಮಬದ್ಧವಾಗಿ ಪಠಿಸಬೇಕು.

**(ಸಂಗ್ರಹ : ಝಹೀರ ಅಹ್ಮದ್ ಖಾನ್, ಪ್ರೈವೇಟ್ ಸೆಕ್ರೇಟರಿ ಕಚ್ಚೇರಿ ಲಂಡನ್‌ನ ರೆಕಾರ್ಡ್ ಭಾಗ) (ಅಖ್ಬಾರೆ ಅಲ್‌ಫಝಲ್ ಇಂಟರ್‌ನ್ಯಾಶ್ನಲ್ 27–10–2020)**

***(ಪುಟ ಸಂಖ್ಯೆ 05ರ ಉಳಿದ ಭಾಗ)***

ಉಳಿದ ವಿವರಗಳನ್ನು ನಾನು ನಂತರ ವಿವರಿಸುತ್ತೇನೆ, ಇನ್‌ಶಾಅಲ್ಲಾಹ್.

ಪಾಕಿಸ್ತಾನದ ಅಹ್ಮದಿಯರನ್ನು ವಿಶೇಷವಾಗಿ ದುಆಗಳಲ್ಲಿ ನೆನಪಿಡಿರಿ. ಪಾಕಿಸ್ತಾನದ ಅಹ್ಮದಿಯರು ಸಹ ಸ್ವತಃ ದುಆದ ಮತ್ತು ದಾನಧರ್ಮಗಳ ಕಡೆಗೆ ಗಮನ ನೀಡಿರಿ. ಅಲ್ಲಾಹನು ಅವರನ್ನು ಸಂರಕ್ಷಿಸಲಿ. ಎದುರಾಳಿಗಳ ಕೆಡುಕುಗಳಿಂದ ಅವರನ್ನು ರಕ್ಷಿಸಲಿ. ದುಷ್ಟರ ಕೆಡುಕುಗಳು ಅವರಿಗೆ ತಿರುಗೇಟಾಗಲಿ. ಪೂರ್ತಿ ಲೋಕದ ಒಳಿತಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಲೋಕವನ್ನು ಗಲಭೆ ಗೊಂದಲಗಳಿಂದ ರಕ್ಷಿಸಲಿ – ಆಮೀನ್.

**(ಅಲ್–ಫಝಲ್ ಇಂಟರ್‌ನ್ಯಾಶನಲ್, ಸೆಪ್ಟೆಂಬರ್ 27, 2024, ಪುಟ 2–5)**

––––––––––––––*****––––––––––––––

## ಅಂತಿಮ ವಿಜಯ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: ಪ್ರಾಯಶಃ ಕೊನೆಗೆ ಕ್ರೈಸ್ತ ಧರ್ಮ ಲೋಕದಾದ್ಯಂತ ವ್ಯಾಪಿಸುವುದೆಂದು ಅಥವಾ ಬೌದ್ಧ ಧರ್ಮ ಲೋಕವನ್ನೆಲ್ಲ ಆವರಿಸುವುದೆಂದು ಭೂಲೋಕದ ಜನರು ಆಲೋಚಿಸುತ್ತಿರಬಹುದು. ಆದರೆ ಅವರ ಈ ಯೋಚನೆ ತಪ್ಪಾಗಿದೆ. ಆಕಾಶದಲ್ಲಿ ದೇವನಿಂದ ನಿರ್ಧರಿಸಲ್ಪಡುವವರೆಗೆ ಯಾವುದೇ ಕಾರ್ಯವು ಭೂಮಿಯಲ್ಲಿ ಸಂಭವಿಸಲಾರದು. ಅಂತಿಮವಾಗಿ ಇಸ್ಲಾಮ್ ಧರ್ಮ ಜನರ ಹೃದಯಗಳನ್ನು ಜಯಿಸುವುದು ಎಂದು ಆಕಾಶ ಭೂಮಿಗಳ ಅಧಿಪತಿಯಾದ ದೇವನು ನನಗೆ ತಿಳಿಸಿರುವನು. **(ಬರಾಹೀನೆ ಅಹ್ಮದಿಯಾ, ಭಾಗ 5; ರೂಹಾನೀ ಖಝಾಇನ್ ಸಂಪುಟ 21, ಪುಟ 427)**

## ತಫ್ಸೀರೆ ಕಬೀರ್

ದೀರ್ಘ ಸಂಕಟಗಳಿಗೆ ನಾವು ಹೆದರಬಾರದು,
ನಮಗಿಂತ ಮುಂಚೆ ಕ್ರೈಸ್ತ ಸಮುದಾಯದವರಿಗೆ ಮುನ್ನೂರ
ಒಂಬತ್ತು ವರ್ಷಗಳ ಕಾಲ ಹಿಂಸಿಸಲಾಯಿತು
ಆದರೆ ಅವರು ತಾಳ್ಮೆಯಿಂದ ಕೆಲಸ ಮಾಡಿದರು ಮತ್ತು
ಅಂತಿಮವಾಗಿ ಆ ತಾಳ್ಮೆಯ ಸಿಹಿ ಫಲವನ್ನು ಸೇವಿಸಿದರು,
ಆದ್ದರಿಂದ ನೀವು ಆತುರಪಡಬೇಡಿ.
ಬದಲಿಗೆ, ಒಬ್ಬನು ತನ್ನ ಕೆಲಸದಲ್ಲಿ ನಿರತನಾಗಿರಬೇಕು
ಮತ್ತು ತಾಳ್ಮೆಯಿಂದ ತೊಂದರೆಗಳನ್ನು ಎದುರಿಸಬೇಕು

ಸಯ್ಯಿದುನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಅವರು ಸೂರಾ ಕಹ್ಫ್‌ನ 26 ನೇ ಆಯತ್ **ವಲಬಿಸೂ ಫೀ ಕಹ್ಫಿಹಿಮ್ ಸಲಾಸ ಮಿಅತಿನ್ ಸಿನೀನ ವಝ್‌ದಾದೂ ತಿಸ್‌ಆ** ನ ವ್ಯಾಖ್ಯಾನದಲ್ಲಿ ಹೇಳುತ್ತಾರೆ: ಈ ಆಯತ್‌ನಲ್ಲಿ, ಅಸ್‌ಹಾಬೆ ಕಹ್ಫ್ (ಗುಹೆಯಲ್ಲಿದ್ದ ಜನರ) ಅವರ ತೊಂದರೆಗಳ ಅವಧಿಯನ್ನು ತಿಳಿಸಲಾಗಿದೆ. ಅವರು ಆಗ್ಗಾಗ ಹಿಂಸೆಗೆ ಒಳಗಾದ ಸಂದರ್ಭದಲ್ಲಿ ಅವರು ಮತ್ತೆ ಮತ್ತೆ ಗುಹೆಗಳಲ್ಲಿ ಅಡಗಿ ಕೊಳ್ಳಬೇಕಾಯಿತು. ಇದು ಮುನ್ನೂರ ಒಂಬತ್ತು ವರ್ಷಗಳ ಅವಧಿ ಎಂದು ಅಲ್ಲಾಹನು ಹೇಳುತ್ತಾನೆ. ಇದು ಇತಿಹಾಸದಿಂದ ದೃಢೀಕರಿಸಲ್ಪಟ್ಟಿದೆ ಏಕೆಂದರೆ ಈ ದುಃಖದ ಅವಧಿಯು ಕ್ರಿಸ್ತನ ಶಿಲುಬೆಗೇರಿಸುವಿಕೆಯೊಂದಿಗೆ ಪ್ರಾರಂಭವಾಗುತ್ತದೆ ಮತ್ತು ಕಾನ್ಸಂಟೈನ್ (ಕಾನ್ಸ್ಟಾಂಟಿನೋಪಲ್ನ ಸ್ಥಾಪಕ) ಕ್ರಿಶ್ಚಿಯನ್ ಆಗಿದ್ದಾಗ ಶಾಂತಿಯ ಅಂತ್ಯವನ್ನು ಸಾಧಿಸಲಾಯಿತು. ಮೇಲೆ ಬರೆದಂತೆ (ಎನ್ಸೈಕ್ಲೋಪೀಡಿಯಾ ಬ್ರಿಟಾನಿಕಾ, ಸಂಪುಟ–5, ಪುಟ–676) ಕಾನ್ಸಂಟೈನ್ ಕ್ರಿ.ಶ. 337 ರಲ್ಲಿ ಕ್ರಿಶ್ಚಿಯನ್ ಆದರು. ಸ್ಪಷ್ಟವಾಗಿ, ಈ ಅವಧಿಯು ಪವಿತ್ರ ಖುರ್‌ಆನ್‌ನ ಹೇಳಿಕೆಗೆ ವಿರುದ್ಧವಾಗಿ ತೋರುತ್ತದೆ, ಆದರೆ ನಾವು ಕ್ರಿಶ್ಚಿಯನ್ ಧರ್ಮದ ಇತಿಹಾಸವನ್ನು ಪರಿಗಣಿಸಿದಾಗ, ಈ ದಿನಾಂಕವು ತಪ್ಪಾಗಿದೆ ಎಂದು ತಿಳಿಯುತ್ತದೆ. ಕಾನ್ಸಂಟೈನ್ ಕ್ರಿಶ್ಚಿಯನ್ ಆದ ನಿಜವಾದ ವರ್ಷ 309 ಆಗಿದೆ ಮತ್ತು ಕ್ರಿಶ್ಚಿಯನ್ ಭೂಗೋಳಶಾಸ್ತ್ರಜ್ಞರು ಸ್ವತಃ ಕ್ರಿಶ್ಚಿಯನ್ ಕ್ಯಾಲೆಂಡರ್ ತಪ್ಪಾಗಿದೆ ಎಂದು ಒಪ್ಪಿಕೊಂಡಿದ್ದಾರೆ. ಇದರ ಪುರಾವೆಯಾಗಿ, ಆದ್ದರಿಂದ ಆರ್ಚ್ ಬಿಷಪ್ ಉಷರ್ಸ್ (Ushers) ತಮ್ಮ ಪುಸ್ತಕದ ಕಾಲಗಣನೆ (Chronology) ಮತ್ತು ಡಾ. ಕ್ಯಾಟೊ ಕಿಟ್ಟೊ ಕ್ರಿಶ್ಚಿಯನ್ ಕ್ಯಾಲೆಂಡರ್‌ನಲ್ಲಿ ಶಿಲುಬೆಯ ಘಟನೆಗೆ ನೀಡಲಾದ ದಿನಾಂಕವು ತಪ್ಪಾಗಿದೆ ಮತ್ತು ಈ ದೋಷವು ಕ್ರಿ.ಶ. 527 ರಲ್ಲಾಗಿದೆ ಎಂದು ತನ್ನ "ಡೈಲಿ ಬೈಬಲ್ ಇಲ್ಲಸ್ಟ್ರೇಶನ್ಸ್" ಪುಸ್ತಕದಲ್ಲಿ ಸಾಬೀತುಪಡಿಸಿದೆ. ವಾಸ್ತವವೆಂದರೆ ಯೇಸು ಕ್ರಿಸ್ತರು ಈ ದಿನಾಂಕಕ್ಕೆ ಕೇವಲ ನಾಲ್ಕು ಅಥವಾ ಆರು ವರ್ಷಗಳ ಮೊದಲು ಜನಿಸಿದರು. ಆದ್ದರಿಂದ ಆ ಸಮಯದಲ್ಲಿ ಅವರು ಕೇವಲ ನಾಲ್ಕರಿಂದ ಆರು ವರ್ಷ ವಯಸ್ಸಿನವರಾಗಿದ್ದರು ಆದರೆ ಮೂವತ್ತಮೂರನೇ ವಯಸ್ಸಿನಲ್ಲಿ ಅವರನ್ನು ಶಿಲುಬೆಯ ಮೇಲೆ ಹಾಕಲಾಯಿತು. ಈಗ ಈ ಹೇಳಿಕೆಯ ಪ್ರಕಾರ, ನಾಲ್ಕು ಮತ್ತು ಆರರ ಸರಾಸರಿಯನ್ನು ತೆಗೆದುಕೊಂಡರೆ, ಅದು ಐದು ಆಗುತ್ತದೆ, ಮೂವತ್ತಮೂರನೇ ವರ್ಷದಲ್ಲಿ ಕ್ರಿಸ್ತನಿಗೆ ಶಿಲುಬೆಯನ್ನು ನೀಡಿದ್ದರಿಂದ, ಕ್ರಿಶ್ಚಿಯನ್ ವರ್ಷದಿಂದ ಇಪ್ಪತ್ತೆಂಟು ವರ್ಷಗಳನ್ನು ಕಳೆಯಬೇಕಾಗುತ್ತದೆ. ಏಕೆಂದರೆ ಕ್ರಿಶ್ಚಿಯನ್ ಕ್ಯಾಲೆಂಡರ್‌ನ ಇಪ್ಪತ್ತೆಂಟು ವರ್ಷಗಳ ನಂತರ ಶಿಲುಬೆ ಸಂಭವಿಸಿದೆ. ಈಗ 337 ರಿಂದ ಇಪ್ಪತ್ತೆಂಟು ವರ್ಷಗಳನ್ನು ತೆಗೆದುಹಾಕಿ ಮತ್ತು ಅದು 309 ವರ್ಷಗಳಾಗುತ್ತದೆ. ಇದು ಕ್ರಿಶ್ಚಿಯನ್ ವರದಿಗಳ ಸರಿಯಾಗಿದೆ ಎಂದು ಸ್ವೀಕರಿಸಿದ್ದರಿಂದಾಗಿದೆ ಇಲ್ಲದಿದ್ದರೆ ಈ ಸಾಕ್ಷ್ಯಾಧಾರಗಳು ಇಲ್ಲದಿದ್ದರೂ, ಪವಿತ್ರ ಖುರ್‌ಆನ್ ಇದರ ಎಲ್ಲಾ ಮಾತುಗಳು ಬೈಬಲ್‌ಗಿಂತ ಸರಿಯಾಗಿದೆ ಎಂದು ಸಾಬೀತಾಗಿದೆ. ಆದಾಗ್ಯೂ, ಅದರ ಮಾತಿಗೆ ಆದ್ಯತೆ ನೀಡಲೇ ಬೇಕಾಗುತ್ತದೆ.

ಈ ಆಯತ್‌ನಲ್ಲಿ, ಸುದೀರ್ಘ ಕಾಲ ಸಂಕಟಗಳಿಗೆ ಹೆದರಬಾರದು. ನಮಗಿಂತ ಮೊದಲಿನ ಕ್ರೈಸ್ತ ಸಮುದಾಯವು ಮುನ್ನೂರ ಒಂಬತ್ತು ವರ್ಷಗಳ ಕಾಲ ನರಳಿದರೂ ತಾಳ್ಮೆಯಿಂದ ಕೆಲಸ ಮಾಡಿದರು ಮತ್ತು ಅಂತಿಮವಾಗಿ ಆ ತಾಳ್ಮೆಯ ಸಿಹಿ ಫಲವನ್ನು ಆಸ್ವಾದಿಸಿದರು. ಆದ್ದರಿಂದ ನೀವು ಆತುರಪಡಬೇಡಿ, ಬದಲಿಗೆ ತಮ್ಮ ಕೆಲಸದಲ್ಲಿ ನಿರತನಾಗಿರಬೇಕು ಮತ್ತು ತಾಳ್ಮೆಯಿಂದ ತೊಂದರೆಗಳನ್ನು ಎದುರಿಸಬೇಖು.

**(ತಫ್ಸೀರ್ ಕಬೀರ್, ಸಂಪುಟ–4, ಪುಟ–440, 2010 ಖಾದಿಯಾನ್)**

––––––––––––––*****––––––––––––––

**MUSLIM TELEVISION AHMADIYYA INTERNATIONAL**
**www.mta.tv**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಮತ್ತು Remingen ಜಮಾಅತ್ ಸಹ ಇದೆ. ಅದರ ಉದ್ಘಾಟನೆ ಹುಝೂರ್ ಅನ್ವರ್(ಅತಬಅ) 2018 ರಲ್ಲಿ ಮಾಡಿದ್ದರು.

2 ಗಂಟೆ 35 ನಿಮಿಷ ಪ್ರಯಾಣದ ನಂತರ ಹುಝೂರ್ ಅನ್ವರ್(ಅತಬಅ) 7 ಗಂಟೆ 50 ನಿಮಿಷಕ್ಕೆ ಜಲ್ಸ ಸ್ಥಳಕ್ಕೆ ತಲುಪಿದರು. ಇಲ್ಲಿ ಉಪಸ್ಥಿತರಿದ್ದ ಜಲ್ಸ ಸ್ಥಳದ ಕಾರ್ಯಕರ್ತರು ಮತ್ತು ಜಮಾಅತ್ ಬಾಂಧವರು, ಸಾವಿರಾರು ಸಂಖ್ಯೆಯಲ್ಲಿ ಹಾಜರಿದ್ದರು. ತುಂಬು ಉತ್ಸಾಹದಿಂದ ಘೋಷಣೆಗಳನ್ನು ಕೂಗುತ್ತಾ ಹುಝೂರ್ ಅನ್ವರ್(ಅತಬಅ) ಅವರನ್ನು ಸ್ವಾಗತಿಸಿದರು.

ಹುಝೂರ್ ಅನ್ವರ್(ಅತಬಅ) ವಾಹನದಿಂದ ಹೊರ ಬರುತ್ತಲೇ ಮಾನ್ಯ ಮುಹಮ್ಮದ್ ಇಲ್ಯಾಸ್ ಸಾಹಿಬ್ ಮಜೂಖಾ ಸಾಹಿಬ್ ಅಫ್ಸರ್ ಜಲ್ಸ ಸಾಲಾನ, ಮಾನ್ಯ ಸದಾಖತ್ ಅಹ್ಮದ್ ಸಾಹಿಬ್ ಅಫ್ಸರ್ ಜಲ್ಸಗಾಹ್ ಮತ್ತು ಮಾನ್ಯ ತಾರಿಖ್ ಝುಫರ್ ಸಾಹಿಬ್ ಅಫ್ಸರ್ ಖಿದ್‌ಮತ್ ಖಲ್ಕ್ ಹುಝೂರ್ ಅನ್ವರ್(ಅತಬಅ) ಅವರಿಗೆ ಶುಭಾಗಮನ ಕೋರಿದರು. ನಂತರ ಹುಝೂರ್ ಅನ್ವರ್(ಅತಬಅ) ಸ್ವಲ್ಪ ಕಾಲಕ್ಕಾಗಿ ವಸತಿ ನಿಲಯ ಕಡೆ ಹೋದರು.

8.35 ಗಂಟೆಗೆ ಹುಝೂರ್ ಅನ್ವರ್(ಅತಬಅ) ತಮ್ಮ ವಸತಿ ನಿಲಯದಿಂದ ಹೊರಗೆ ಬಂದರು. ಮೊಟ್ಟ ಮೊದಲಿಗೆ messe stuttgart ನ ನಿರ್ವಹಕರು (ಅದರಲ್ಲಿ ಈ ಕಾಂಪ್ಲೆಕ್ಸ್ managements chief executive ಸಹ ಸೇರಿದ್ದರು). ಹುಝೂರ್ ಅನ್ವರ್(ಅತಬಅ) ಅವರೊಂದಿಗೆ ಭೇಟಿ ಮಾಡುವ ಭಾಗ್ಯ ಪಡೆದರು.

Chief exectutive ಹೇಳಿದರು. ನಾವು Karlsruhe ಗೆ ಹೋಗಿ ಜಲ್ಸ ನೋಡಿದ್ದೆವು. ನಮ್ಮ ಅಭಿಲಾಷೆಯಿತ್ತು. ಜಮಾಅತ್ ಇಲ್ಲಿ ಬಂದು ಜಲ್ಸ ಏರ್ಪಡಿಸಬೇಕು. ಆಗ ಹುಝೂರ್ ಅನ್ವರ್(ಅತಬಅ) ಹೇಳಿದರು. ಧನ್ಯವಾದಗಳು ನೀವು ಬಹಳ ಉತ್ತಮ ಜಾಗವನ್ನು ಜಲ್ಸಕ್ಕಾಗಿ ನೀಡಿದ್ದೀರಿ.

ಅವರು ಹೇಳಿದರು: ಅಹ್ಮದಿ ಕಾರ್ಯಕರ್ತರು ತುಂಬಾ ಒಳ್ಳೆಯ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಅಷ್ಟು Professional ರೀತಿಯಲ್ಲಿ, ನಾನು ಅವರಿಗೆ ತಮ್ಮ ಕಂಪನಿಯಲ್ಲಿ ಇರಿಸಲು ಸಿದ್ಧನಿದ್ದೇನೆ. ಹುಝೂರ್ ಅನ್ವರ್(ಅತಬಅ) ಮುಗುಳ್ನಗುತ್ತಾ ಹೇಳಿದರು. ನನ್ನ ಕಡೆಯಿಂದ ಅನುಮತಿ ಇದೆ.

ಹುಝೂರ್ ಅನ್ವರ್(ಅತಬಅ) ಕೇಳಿದರು. ಈ ಜಾಗ ನಗರದ ಒಳಗೆ ಬರುತ್ತದೆಯೇ, ಅವರು ಹೇಳಿದರು, ಈ ಜಾಗ ನಗರದಿಂದ ಒಂದಿಷ್ಟು ದೂರವೇನಿದೆ. ಆದರೆ ಈ ಮೂರು ದಿನಗಳಲ್ಲಿ ನಾವು ತಮ್ಮನ್ನು ನಗರ ಒಳಗಡೆಯಮತೆ ಅನುಭವಿಸುವಮತಾಗಿದೆ. parking ವಿಷಯದಲ್ಲಿ ಹುಝೂರ್ ಅನ್ವರ್(ಅತಬಅ) ವಿಚಾರಿಸಿದಾಗ ಅವರು ಹೇಳಿದರು. ಇಲ್ಲಿ ಹತ್ತು ಸಾವಿರ ವಾಹನಗಳನ್ನು ನಿಲ್ಲಿಸುವಷ್ಟು ಸ್ಥಳವಿದೆ. ಅದೇ ರೀತಿ ಇಲ್ಲಿಂದ ವಿಮಾನ ನಿಲ್ದಾಣ ತುಂಬಾ ಹತ್ತಿರದಲ್ಲಿದೆ. 300 ಮೀಟರ್ ಕಾಲ್ನಡಿಗೆಯಲ್ಲಿ ಜನರು ಇಲ್ಲಿಗೆ ಬರುತ್ತಾರೆ.

ಅನಂತರ ಹುಝೂರ್ ಅನ್ವರ್(ಅತಬಅ) ಜಲ್ಸ ಸಾಲಾನದ ವೀಕ್ಷಣೆ ಪ್ರಾರಂಭಿಸಿದರು. ಒಂದು ಕಡೆ ಬ್ರಿಟಾನಿಯಾದಿಂದ Bycle ಮೇಲೆ ಬಂದವರ ತಂಡದವರು ನಿಂತುಕೊಂಡಿದ್ದರು. ಹುಝೂರ್ ಅನ್ವರ್(ಅತಬಅ) ಪ್ರೀತಿಯಿಂದ ಅವರ ಬಗ್ಗೆ ವಿಚಾರಿಸಿದರೆ, ಎಲ್ಲರೂ ಕ್ಷೇಮವಾಗಿದ್ದಾರೆಯೇ ಮತ್ತು ಕೊನೆಯ ದಿನ ಎಷ್ಟು ದೂರದ ಪ್ರಯಾಣ ಮಾಡಿದ್ದೀರಿ ಎಂದು ಕೇಳಿದರು. ಆಗ ಆ ತಂಡದ ನಾಯಕರಾದ ಇಜಾಝ್ ಅಹ್ಮದ್ ತಾಹಿರ್ ಸಾಹಿಬ್ ಹೇಳಿದರು. ಕೊನೆಯ ದಿನ 129 ಕಿ.ಮೀ ದೂರ ಕ್ರಮಿಸಿದ್ದೇವೆ. ಅದರಲ್ಲಿ ಸುಮಾರು 1000 ಮೀಟರ್ ದೂರ ತುಂಬಾ ಎತ್ತರ ಪ್ರದೇಶದ್ದಾಗಿತ್ತು. ಹುಝೂರ್ ಅನ್ವರ್(ಅತಬಅ) ಮಜ್‌ಲಿಸ್ ಅನಸರುಲ್ಲಾ ಅವರಿಗೆ Cycling ಮಾಡಲು ಹೇಳಿದ್ದರು. ಅದಕ್ಕೆ, ಮಜ್‌ಲಿಸ್ ಅನಸಾರುಲ್ಲಾ ಲಬ್ಬೈಕ್ ಎಂದು ಹೇಳುತ್ತಾ, ಜರ್ಮನಿಯ ಶತಮಾನೋತ್ಸವ ಜಲ್ಸಸಾಲಾನ ಸಂದರ್ಭದಲ್ಲಿ ಋಭಿಇಟಜ ಮೂಲಕ ಪ್ರಯಾಣ ಮಾಡಲು ನಿಶ್ಚಯಿಸಿದರು.

26 ಆಗಸ್ಟ್-ಶನಿವಾರ ದಿನದಂದು 16 ಜನರ ತಂಡ ಇಸ್ಲಾಮಾಬಾದ್ ಯು.ಕೆ ಯಿಂದ ಹೊರಟಿತು. ಮಸ್ಜಿದ್ ಮುಭಾರಕ್ ಇಸ್ಲಾಮಾಬಾದ್‌ನಿಂದ ಫಜರ್ ನಮಾಝ್ ನಂತರ ಹುಝೂರ್ ಅನ್ವರ್(ಅತಬಅ) ಪ್ರೀತಿಯಿಂದ ಘೋಷಣೆಯೊಂದಿಗೆ ತಂಡಕ್ಕೆ ಬೀಳ್ಕೊಟ್ಟರು. ಹಾಫಿಝ್ ಈಜಾಝ್ ಅಹ್ಮದ್ ತಾಹಿರ್ ಸಾಹಿಬ್ ತಂಡದ ನಾಯಕರಾಗಿದ್ದರು. ಅವರು ಮಜ್‌ಲಿಸ್ ಅನಸುರುಲ್ಲಾ ಯು.ಕೆ ಯ ಸೈಕಲಿಂಗ್ (Sicling club) ನ ಚೇರ್ಮನ್ ಸಹ ಆಗಿದ್ದರು. Dover ಯಿಂದ Fary ಮೂಲಕ ಪ್ರಯಾಣ ಬೆಳೆಸಿ Dunkirk ತಲುಪಿದರು. ನಗರ Ostende ತಲುಪಿದರು. ಮತ್ತು ರಾತ್ರಿ ಜಮಾಅತ್‌ನ ಸೆಂಟರ್‌ನಲ್ಲಿ ತಂಗಿದರು. ಮತ್ತೆ 27-ಆಗಸ್ಟ್ ರಂದು 110 ಕಿ.ಮೀ, 28, ಆಗಸ್ಟ್ ರಂದು 167 ಕಿ.ಮೀ, 29, ಆಗಸ್ಟ್ ರಂದು 149 ಕಿ.ಮೀ ಮತ್ತು 30-ಆಗಸ್ಟ್ ರಂದು 181 ಕಿ.ಮೀ ಪ್ರಯಾಣ ಮಾಡಿದರು. ಮತ್ತು ಕೊನೆಯ ದಿನ 31-ಆಗಸ್ಟ್‌ರಂದು mannheim ಜರ್ಮನಿಯಿಂದ ಹೊರಟು 129 ಕಿ.ಮೀ ದೂರ ಕ್ರಮಿಸಿ Stuttgart ಜಲ್ಸಾ ಸ್ಥಳಕ್ಕೆ ತಲುಪಿದರು. ಈಗ್ಗೆ ಒಟ್ಟು 842 ಕಿ.ಮೀ ದೂರದ ಪ್ರಯಾಣ ಮಾಡಿದರು. ಈ ಪ್ರಯಾಣದಲ್ಲಿ ಭಾಗವಹಿಸಿದ 3 ಅನ್‌ಸಾರರ ವಯಸ್ಸು 60 ಕ್ಕೆ ಸಮೀಪವಿತ್ತು.

ಆನಂತರ ಹುಝೂರ್ ಅನ್ವರ್(ಅತಬಅ) ಇತಿಹಾಸ ವಿಭಾಗದನ್ವಯ ಏರ್ಪಡಿಸಿದ ವಸ್ತು ಪ್ರದರ್ಶನ ವೀಕ್ಷಿಸಿದರು. ವಸ್ತು ಪ್ರದರ್ಶನದ ಭೇಟಿಯ ನಡುವೆ ಹುಝೂರ್ ಅನ್ವರ್(ಅತಬಅ) 2 ವೆಬ್‌ಸೈಟ್‌ನ್ನು ಉದ್ಘಾಟಿಸಿದರು. ಒಂದು ವೆಬ್‌ಸೈಟ್ ಜರ್ಮನಿಯ ಮಾಸಿಕ ಪತ್ರಿಕೆ ಅಹ್ಮದಿಯಾ ಆಗಿತ್ತು. ಎರಡನೇ ವೆಬ್‌ಸೈಟ್ ಅಹಮದಿಯ ಜಮಾಅತ್ ಜರ್ಮನಿಯ ಇತಿಹಾಸ ವಿಭಾಗಕ್ಕೆ ಸಂಬಂಧಿಸಿದ್ದಾಗಿತ್ತು. ವಸ್ತು ಪ್ರದರ್ಶನದಲ್ಲಿ ವಿವಿಧ ರೀತಿಯ Flaxess ಹಾಕಲಾಗಿತ್ತು. ಅದರಲ್ಲಿ ಹಝ್‌ರತ್ ಅಖದ್ದಸ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದಿಂದ ಹಿಡಿದು ಪಂಚಮ ಖಲೀಫರ ಕಾಲದವರೆಗಿನ ಅಹ್ಮದಿಯಾ ಜಮಾಅತ್ ಜರ್ಮನಿಯ ಇತಿಹಾಸದ ವಿವಿಧ ಅಧ್ಯಾಯಗಳನ್ನು ಸರಳ ಭಾಷೆಯಲ್ಲಿ ಪ್ರಸ್ತುತಪಡಿಸಲಾಗಿತ್ತು. ಈ ಫ್ಲಾಕ್ಸೆಸ್‌ಗಳು ಜರ್ಮನ್ ಮತ್ತು ಇಂಗ್ಲೀಷ್ ಎರಡೂ ಭಾಷೆಗಳಲ್ಲಿದ್ದರು.

ಈ ವಸ್ತು ಪ್ರದರ್ಶನದಲ್ಲಿ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು 1885 ರಲ್ಲಿ ವಿವಿಧ ಸಮುದಾಯಗಳ ಮುಖಂಡರಿಗೆ ಮತ್ತು ಅಮೀರರಿಗೆ ಮತ್ತು ದೇಶದ ಮುಖಂಡರಿಗೆ ಬರೆದ ಪತ್ರಗಳ ವಿವರವು ಇತ್ತು. ಅದರ ಪರಿಣಾಮವಾಗಿ ಜರ್ಮನಿಯಿಂದ ಹೊರಟ ಬಂಧುಗಳು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರನ್ನು ಸಂಪರ್ಕಿಸಿದಿದರು. ಅದೇ ರೀತಿ 1923 ರಲ್ಲಿ ನಿರ್ಮಾಣಗೊಳ್ಳಲಾಗದ ಮಸೀದಿ ಬರ್ಲಿನ್ ಮತ್ತು, ಪ್ರಾರಂಭಿಕ ಮಸೀದಿಗಳಲ್ಲಿ ಮಸ್ಜಿದ್ ಫಜಲಿ ಉಮರ್ ಹೆಂಬರ್ಗ್ ಮತ್ತು ಮಸ್ಜಿದ್ ನೂರ್ ಫ್ರೆಂಕ್‌ಫರ್ಟ್‌ನ ಒಂದು ಫ್ಲ್ಯಾಕ್ಸ್ ಮೇಲೆ ಹಾಕಲಾಗಿತ್ತು. ಅಲ್ಲದೇ ಈ Flaxes ನಲ್ಲಿ ಹಝ್‌ರತ್ ಖಲೀಫತುಲ್ ಮ್ಹಖುಜಿ ಸಾನಿ(ಡಿ) ಹಝ್‌ರತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್), ಹಝ್‌ರತ್ ಖಲೀಫತುಲ್ ಮಸೀಹ್ ರಾಬೀ(ರಹ್) ಮತ್ತು ಹಝ್‌ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಅವರುಗಳ ಜರ್ಮನಿ ಪ್ರವಾಸವನ್ನು ಅತ್ಯಂತ ಮನೋಹರಕರ ರಿತಿಯಲ್ಲಿ ಪ್ರಸ್ತುತಪಡಿಸಲಾಗಿತ್ತು.

ಅನಂತರ ಹುಝೂರ್ ಅನ್ವರ್(ಅತಬಅ) ತಬ್ಲೀಗ್ಹ್ ವಿಭಾಗದಿಂದ ಇಸ್ಲಾಂ ಧರ್ಮದ ಕುರಿತಾಗಿ ಹಾಗೂ ವಿವಿಧ ಭಾಷೆಯ ಅಹ್ಮದಿಯಾ ಸಾಹಿತ್ಯಗಳ ವಸ್ತು ಪ್ರದರ್ಶನವನ್ನು ವೀಕ್ಷಿಸಿದರು.

ತುರ್ಕಿ, ಫಾರ್ಸಿ, Balkan ಭಾಷೆ, ಬಾಂಗ್ಲಾ, ರಶಿಯನ್, ಚೀನಿ ಮತ್ತು ವಿವಿಧ ಆಫ್ರಿಕನ್ ಭಾಷೆಗಳ ಸಾಹಿತ್ಯ ತುಂಬಾ ಸುಂದರವಾಗಿ ಪ್ರದರ್ಶಿಸಲಾಗಿತ್ತು.

ಇಸ್ಲಾಂ ಧರ್ಮದ ಕುರಿತು ವಸ್ತು ಪ್ರದರ್ಶನದಲ್ಲಿ ಇಸ್ಲಾಮಿ ವಿಶ್ವಾಸದ ಮೂಲಭೂತ ತತ್ವಗಳನ್ನು ವಿವಿಧ ಫ್ಲ್ಯಾಕ್ಸ್‌ನಲ್ಲಿ ಹಾಕಲಾಗಿತ್ತು. ಅದರಲ್ಲಿ ಅಲ್ಲಾಹುತಾಲಾ, ಪವಿತ್ರ ಖುರ್‌ಆನ್, ಪವಿತ್ರ ಪ್ರವಾದಿ(ಸ) ಮತ್ತು ಅವರ ಕುರಿತು ವಿವಿಧ ಚಿಂತಕರ ಅಭಿಪ್ರಾಯಗಳು, ಇಸ್ಲಾಂ ಮತ್ತು ವಿಜ್ಞಾನ, ಇಸ್ಲಾಮಿನ ತತ್ವಗಳು, ಸಿಹಾಸತ್ತ (ಹದೀಸ್), ಜಿಹಾದ್, ಹಝ್‌ರತ್ ಅಖದಸ್ ಮಸೀಹ್ ಮೌಊದ್(ಅ), ಸೂರ್ಯ ಚಂದ್ರ ಗ್ರಹಣ, ಹತ್ತು ಬೈಅತ್ತಿನ ಶರತ್ತುಗಳು, ಖಿಲಾಫತ್ ಅಹ್ಮದಿಯಾ, ಖಾದಿಯಾನ್, ಮಿನಾರತುಲ್ ಮಸೀಹ್, ಹುಝೂರ್ ಅನ್ವರ್(ಅತಬಅ) ಅವರ ಹನ್ನೆರಡು ಸಂದೇಶಗಳು ಇತ್ಯಾದಿ ಶಾಮೀಲಾಗಿದ್ದವು.

ಈ Exhibition ನಲ್ಲಿ ಖುರ್‌ಆನ್‌ನ ವಿವಿಧ ಭಾಷೆಗಳ ಅನುವಾದ ಸಹ ಪ್ರದರ್ಶಿಸಲಾಗಿತ್ತು. ಹಾಗೂ 2020 ರಿಮದ ಇಲ್ಲಿಯವರೆಗಿನ ತಬ್ಲೀಗ್ಹ್ ಪ್ರಯತ್ನಗಳ ಅಂಕೆ ಸಂಖ್ಯೆಗಳನ್ನು ಪ್ರಸ್ತುತಪಡಿಸಲಾಗಿತ್ತು.

ವಸ್ತು ಪ್ರದರ್ಶನ ವೀಕ್ಷಣೆಯ ನಂತರ ಹುಝೂರ್ ಅನ್ವರ್(ಅತಬಅ) ಹೊರಗೆ ಬಂದಾಗ ಒಂದು ಸ್ಥಳದಲ್ಲಿ ಆಫ್ರೀಕನ್ ಬಂಧುಗಳು ತಮ್ಮ ವಿಶಿಷ್ಟ ಶೈಲಿಯಲ್ಲಿ, **'ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದುರ್ ರಸೂಲುಲ್ಲಾಹ್"** ಪಠಿಸುತ್ತಿದ್ದರು, ಮತ್ತು ಎತ್ತರದ ಧ್ವನಿಯಲ್ಲಿ **"ಇನ್ನಿ ಮಅಕ ಯಾ ಮಸ್ರೂರ್"** ಹೇಳುತ್ತಿದ್ದರು. ಹುಝೂರ್ ಅನ್ವರ್(ಅತಬಅ) ಪ್ರೀತಿಪೂರ್ವಕವಾಗಿ ಅವರ ಬಳಿ ಸ್ವಲ್ಪ ಹೊತ್ತು ಕಳೆದರು ಮತ್ತು ಅವರಿಗೆ ಹೇಳಿದರು. ನೀವು ಯಾವ ದೇಶದಿಂದ ಬಂದಿರುವಿರಿ, ಆಗ ಅವರು ಹೇಳಿದರು. ಗಿನಿಬಿಸಾವುದಿಂದ.

ಅನಂತರ ಹುಝೂರ್ ಅನ್ವರ್(ಅತಬಅ) ಉಪಹಾರ ಗೃಹಕ್ಕೆ ಬಂದರು,

ಒಂದು ಭಾಗದಲ್ಲಿ ವಿವಿಧ ಧವಸ ಧಾನ್ಯಗಳು ಮತ್ತು ಇತರೆ ಸಾಮಾನುಗಳು ಸಂಗ್ರಹಿಸಲಾಗಿತ್ತು. ಹುಝೂರ್ ಇದನ್ನು ನೋಡುತ್ತಾ ಉಪಹಾರ ಗೃಹಕ್ಕೆ ತೆರಳಿದರು. ಸಾಯಂಕಾಲದ ಊಟಕ್ಕಾಗಿ ಬೇಳೆ ಮತ್ತು ಮಾಂಸ ಬಟಾಟೊ ತಯಾರಿಸಲಾಗಿತ್ತು. ಹುಝೂರ್ ಅನ್ವರ್(ಅತಬಅ) ಪ್ರೀತಿಪೂರ್ವಕವಾಗಿ ಬೆಂದಿದ ಬಟಾಟೊ ಮಾಂಸದ ಒಂದು ತುತ್ತು ಸೇವಿಸಿ ನೋಡಿದರು. ಇದು ಸರಿಯಾಗಿದೆಯೇ ಇಲ್ಲವೋ ಎಂದು ಪರೀಕ್ಷಿಸಿದರು. ಹುಝೂರ್ ಅನ್ವರ್(ಅತಬಅ) ಬೇಳೆಯನ್ನು ಸಹ ಪರೀಕ್ಷಿಸಿದರು ಮತ್ತು ಊಟದ ವ್ಯವಸ್ಥೆ ಉತ್ತಮವಾಗಿದೆಯೇ ಇಲ್ಲ ಎಂಬುದನ್ನು ಪರೀಕ್ಷಿಸಿದರು.

ಅನಂತರ ಹುಝೂರ್ ಅನ್ವರ್(ಅತಬಅ) ವಿವಿಧ ದೇಶಗಳಿಂದ ಬಂದ ಅತಿಥಿಗಳ ವ್ಯವಸ್ಥೆ ಅವರ ಸ್ವಭಾವ ಮತ್ತು ಅಗತ್ಯಗಳ ಪ್ರಕಾರ ಆಗಿದೆಯೇ ಇಲ್ಲ ಎಂಬುದನ್ನು ಹುಝೂರ್ ಅನ್ವರ್(ಅತಬಅ) ವೀಕ್ಷಿಸಿದರು.

ಉಪಹಾರ ಗೃಹದ ಕಾರ್ಯಕರ್ತರು ಒಂದು ದೊಡ್ಡ ಗಾತ್ರದ ಕೇಕ್ ತಯಾರಿಸಿದ್ದರು. ಹುಝೂರ್ ಅನ್ವರ್(ಅತಬಅ) ಪ್ರೀತಿಪೂರ್ವಕವಾಗಿ ಕಾರ್ಯಕರ್ತರಿಗಾಗಿ ಆ ಕೇಕ್‌ಅನ್ನು ಕತ್ತರಿಸಿಕೊಟ್ಟರು. ಅನಂತರ ಕಾರ್ಯಕರ್ತರೆಲ್ಲರೂ ಸೇರಿ ಹುಝೂರ್ ಅನ್ವರ್(ಅತಬಅ)ರ ಜೊತೆ ಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು.

ಅತಿಥಿ ಗೃಹದ ಹೊರಗೆ ವಾಷಿಂಗ್ ಮೆಷಿನ್ ಇಡಲಾಗಿತ್ತು. ಇದು ಹಿಂದಿನ ಹನ್ನೆರಡು ಹದಿಮೂರು ವರ್ಷಗಳಿಂದ ಇದೆ. ಸಮಯ ಸಮಯಕ್ಕೆ ಅದಕ್ಕೆ ಉತ್ತಮಪಡಿಸುತ್ತಿದ್ದೇವೆ. ಈ ಮೆಷಿನ್ ಅಹ್ಮದಿ ಇಂಜಿನಿಯರೇ ಸ್ವತ: ತಯಾರಿಸಿದ್ದಾರೆ. ಈ ಮೆಷಿನಿನ ವಿಶೇಷತೆ ಏನೆಂದರೆ ಸ್ವಚ್ಛತೆಗಾಗಿ ಹೇಗೆ ಇಟ್ಟರೆ ಅದು automatic ಆಗಿ Function ಪ್ರಾರಂಭಿಸುತ್ತದೆ. ಇಂತಹ ಒಂದು ಸೀನಿಯರ್ System ಅಳವಡಿಸಲಾಗಿದೆ. ಅದರಿಂದ Automatic ಕಾರ್ಯ ಆರಂಭವಾಗುತ್ತದೆ ಮತ್ತು ಸ್ವಚ್ಛತೆ ಕಾರ್ಯ ಮುಗಿದ ನಂತರವೇ Automatic ಆಗಿ ಹೊರಗೆ ಬರುತ್ತದೆ.

Messee Stuttgart ನಲ್ಲಿ ಹತ್ತು ದೊಡ್ಡ ಸಭಾಂಗಣಗಳಿವೆ. ಅದರಲ್ಲಿ ಪುರುಷರ ಮಹಿಳೆಯರ ಜಲ್ಸಗಾಹ್ ಮತ್ತು ವಸತಿ ಭಾಗಗಳು ಮತ್ತು ಊಟ ಮಾಡಿಸುವ ವ್ಯವಸ್ಥೆ ಅಲ್ಲದೇ ವಿವಿಧ ವಿಭಾಗಗಳ ಕಚೇರಿಗಳು ಸಹ ಸ್ಥಾಪಿಸಲಾಗಿದೆ.

ಸಭಾಂಗಣ ಸಂಖ್ಯೆ 1 : ಇದರಲ್ಲಿ ಪುರುಷರ ಜಲ್ಸಗಾಹ್ ಇದೆ.

ಸಭಾಂಗಣ ಸಂಖ್ಯೆ 2 : ಇದರಲ್ಲಿ ಇತಿಹಾಸ ವಿಭಾಗದ ವಸ್ತು ಪ್ರದರ್ಶನವಿದೆ.

ತಬ್ಲೀಗ್ನ ವಿಭಾಗದ ವಸ್ತು ಪ್ರದರ್ಶನ ಇದೆ. ಖುರ್‌ಆನ್ ಕೇಳಿಗ್ರಾಫಿನ ವಸ್ತು ಪ್ರದರ್ಶನ ಇದೆ. ವಿದೇಶಿ ಅತಿಥಿಗಳಿಗಾಗಿ ಮೀಸಲಾತಿ ವಿಭಾಗದನ್ವಯ ಆತಿಥ್ಯದ ವ್ಯವಸ್ಥೆಯು ಇದೇ ಸಭಾಂಗಣದಲ್ಲಿ ಮಾಡಲಾಗಿದೆ. ಹುಝೂರ್ ಅನ್ವರ್(ಅತಬಅ) ಅವರ ಜರ್ಮನ್ ಅತಿಥಿಗಳೊಡನೆ ಭಾಷಣ ಇದೇ ಸಭಾಂಗಣದ ಒಂದು ಭಾಗದಲ್ಲಾಗುವುದು.

ಸಭಾಂಗಣ ಸಂಖ್ಯೆ 3 : ಪುರುಷರಿಗಾಗಿ ಊಟ ಬಲಸುವ ವ್ಯವಸ್ಥೆ ಇದೇ ಸಭಾಂಗಣದಲ್ಲಿದೆ.

ಸಭಾಂಗಣ ಸಂಖ್ಯೆ 4 : ಇದರಲ್ಲಿ ಪುರುಷರಿಗೆ ವಸತಿಯ ಏರ್ಪಾಡು ಮಾಡಲಾಗಿದೆ.

ಸಭಾಂಗಣ ಸಂಖ್ಯೆ 5 : ಇದರ ಒಂದು ಭಾಗ ಪುರುಷರ ಪೇಟೆಗೊಸ್ಕರ ವಿಶಿಷ್ಠಗೊಳಿಸಲಾಗಿದೆ. ಅದಲ್ಲದೆ ವಿವಿಧ ವಿಭಾಗಗಳಾದ ಬುಕ್‌ಸ್ಟಾಲ್, ರಿಶ್ತನಾತ, Review of Religious, ಅಲ್–ಫಝುಲ್, ನೂರ್‌ನ್ಯಾಗ್ಜೀನ್, IHRC, ಜಾಮಿಯಾ ಅಹ್ಮದಿಯಾ, ತಾಲೀಮುಲ್ ಖುರ್‌ಆನ್ ವಖ್ಫೆ ಆರ್ಝಿ, ವಖ್ಫ್ ನೌ, ತಾಲೀಮ್, ವಸಾಯ, ವಾಣಿಜ್ಯಗಳನ್ನು ಸ್ಥಾಪಿಸಲಾಗಿದೆ.

ಸಭಾಂಗಣ ಸಂಖ್ಯೆ 6: ಈ ಸಭಾಂಗಣಕ್ಕೆ ಎರಡು ಭಾಗಗಳನ್ನಾಗಿ ವಿಂಗಡಿಸಿ, ಒಂದು ಭಾಗ ಪುರುಷರಿಗಾಗಿ, ಇನ್ನೊಂದು ಭಾಗ ಸ್ತ್ರೀಯರ ವಸತಿಗಾಗಿ ಒದಗಿಸಲಾಗಿದೆ.

ಸಭಾಂಗಣ ಸಂಖ್ಯೆ 7 : ಇದರಲ್ಲಿ ಮಹಿಳೆಯರ ಜಲ್ಸಗಾಹ್ ಇದೆ.

ಸಭಾಂಗಣ ಸಂಖ್ಯೆ 8 : ಇದರಲ್ಲಿ ಮಹಿಳೆಯರಿಗಾಗಿ ಊಟದ ವ್ಯವಸ್ಥೆ ಮಾಡಲಾಗಿದೆ.

ಸಭಾಂಗಣ ಸಂಖ್ಯೆ 9 : ಇದರಲ್ಲಿ ಒಂದು ಭಾಗ ಮಕ್ಕಳು, ಮಹಿಳೆಯರಿಗೆ ಉಪಯೋಗಿಸಲಾಗಿದೆ, ಮತ್ತೊಂದು ಭಾಗದಲ್ಲಿ ಮಹಿಳೆಯರಿಗೆ ಟಚಿಡಿಇಟಿರ ವ್ಯವಸ್ಥೆ ಮಾಡಲಾಗಿದೆ.

ಸಭಾಂಗಣ ಸಂಖ್ಯೆ 10: ಇದು ಲಜ್ನ (ಮಹಿಳೆಯರ) ವಸತಿಗಾಗಿ ವಿಶಿಷ್ಠಗೊಳಿಸಲಾಗಿದೆ.

ಇವುಗಳಲ್ಲದೇ ವಿವಿಧ ಸ್ಥಳಗಳಲ್ಲಿ ಕೆಳಗೆ ನಮುದಿತ ಕಚೇರಿಗಳನ್ನು ಸ್ಥಾಪಿಸಲಾಗಿದೆ. ದಫ್ತರ್ ಜಲ್ಸ ಸಾಲಾನ, Reception, Decoration, ವಸತಿ, ಆತಿಥ್ಯ, Transport, Audio, Video, ಸಾಮಾಜಿಕ ಮಾಧ್ಯಮ, Communication, IT ವಿಭಾಗ, Registration, ಶಿಸ್ತುಪಾಲನೆ, ದಫ್ತರ್ ಜಲ್ಸಗಾಹ್, ನೀರು ಸರಬರಾಜು, ರೇಡಿಯೋ, ದಫತರ್ ಉಮಾಮಿ, ದಫತರ್ ಖಿದಮತ್ ಖಲ್ಕ್, ಧ್ವಜ ಸಂರಕ್ಷಣೆ, ತರಬೇತಿ ವಿಭಾಗ, ಕಡಿಝ ವಿಭಾಗ.

ಈ Complex ವೀಕ್ಷಣೆ ಮತ್ತು ಸಾಮೂಹಿಕ Photo ನಂತರ ಹುಝೂರ್ ಅನ್ವರ್ ಲಜ್ನ (ಮಹಿಳೆಯರ) ಜಲ್ಸಗಾಹ್ ವ್ಯವಸ್ಥೆ ಪರಿಶೀಲಿಸಲು ಹೊರಟರು ಮತ್ತು ಲಜ್ನಗಳ ವ್ಯವಸ್ಥೆಯನ್ನು ವೀಕ್ಷಿಸಿದರು. ನಂತರ ಲಜ್ನ ಮತ್ತು ವ್ಯವಸ್ಥಾಪಕರೊಡನೆ ವಿವಿಧ ಕಾರ್ಯಗಳ ಬಗ್ಗೆ ವಿಚಾರಿಸಿದರು.

ಇಲ್ಲಿಯ ವೀಕ್ಷಣೆಯ ನಂತರ ಹುಝೂರ್ ಅನ್ವರ್(ಅತಬಅ) ಜಲ್ಸಗಾಹ್ ಆಗಮಿಸಿದರು. ಅಲ್ಲಿ ಕಾರ್ಯಕ್ರಮದನ್ವಯ ಜಲ್ಸ ಸಾಲಾನ ಪೈಕಿ ಕರ್ತವ್ಯ ಪಾಲಕರ ಉದ್ಘಾಟನಾ ಸಮಾರಂಭವಿತ್ತು. ಎಲ್ಲಾ ವ್ಯವಸ್ಥಾಪಕರು, ತಮ್ಮ ಸಹಾಯಕರೊಂದಿಗೆ ಶಿಸ್ತುಬದ್ಧವಾಗಿ ಕುಳಿತಿದ್ದರು.

ಅಫ್‌ಸರ್ ಜಲ್ಸ ಸಾಲಾನ, ಅಫ್‌ಸರ್ ಜಲ್ಸಗಾಹ್ ಮತ್ತು ಅಫ್‌ಸರ್ ಖಿದ್‌ಮತ್ ಖಲ್ಕ್ ಹೊರತಾಗಿ" ನಾಯಿಬ್ ಅಫ್‌ಸರಾನ್‌ನ ಸಂಖ್ಯೆ 15 ಆಗಿದೆ. ನಾಝಿಮೀನ್ ಸಂಖ್ಯೆ 83, ನಾಯಿಬ್ ನಾಝಿಮೀನಗಳ ಸಂಖ್ಯೆ 296, ಮುನ್‌ತಿಝಿಮೀನ್‌ಗಳ ಸಂಖ್ಯೆ 504, ಸಹಾಯಕ ಸಂಖ್ಯೆ: 669, ಈ ರೀತಿ ಒಟ್ಟು 7589 ಪುರುಷರು ಮತ್ತು ಮಕ್ಕಳು (ಅತ್ಫಾಲ್) ಕರ್ತವ್ಯವನ್ನು ಪಾಲಿಸುತ್ತಿದ್ದರು.

ಸಮಾರಂಭದ ಪ್ರಾರಂಭ 9.5 ಕ್ಕೆ ಪವಿತ್ರ ಖುರ್‌ಆನ್ ಪಾರಾಯಣದೊಂದಿಗೆ ಆಯಿತು. ಅದನ್ನು ಹಾಫಿಝ್ ಅವೇಸ್ ಅಹ್ಮದ್ ಖಮರ್ ಸಹಿಬ್ ನೆರವೇರಿಸಿದರು. ಅದರ ಉರ್ದು ಅನುವಾದ ಇಹ್‌ಸಾನ್ ಅಹ್ಮದ್ ಸಾಹಿಬ್ ಪ್ರಸ್ತುತಪಡಿಸಿದರು. ನಂತರ 9.10 ಕ್ಕೆ ಹುಝೂರ್ ಅನ್ವರ್(ಅತಬಅ) ತಮ್ಮ ಭಾಷಣ ಪ್ರಾರಂಭಿಸಿದರು.

## ಹುಝೂರ್ ಅನ್ವರ್(ಅತಬಅ) ರವರ ಭಾಷಣ

## ಕರ್ತವ್ಯಪಾಲಕರ ಸಭೆ ಜಲ್ಸ ಸಾಲಾನ ಜರ್ಮನಿ 2023

ತಸ್ಮೀಯ ನಂತರ ಹುಝೂರ್ ಅನ್ವರ್(ಅತಬಅ) ಹೇಳಿದರು: ಅಲ್ಲಾಹನ ತುಂಬಾ ಕೃಪೆ ಉಪಕಾರ ನಮ್ಮ ಮೇಲಿದೆ. ಒಂದು ದೀರ್ಘ ಅವಧಿಯ ನಂತರ ಜರ್ಮನಕಿ ಜಮಾಅತ್‌ಗೆ ಮತ್ತೊಮ್ಮೆ ವಿಶಾಲ ನೆಲೆಯಲ್ಲಿ ಜಲ್ಸ ಆಚರಿಸುವ ಭಾಗ್ಯ ದೊರೆಯುತ್ತದೆ. ಇಲ್ಲಿ ಸ್ಥಳದ ಸಮಸ್ಯೆಯಿತು. ಆದರೆ ಅಲ್ಲಾಹನು ಕರುಣಿಸಿದನು ಮತ್ತು ಒಂದು ಸ್ಥಳ ದೊರೆಯಿತು. ಮುಂದೆಯೂ ಭರವಸೆ ಇದೆ. ಜರ್ಮನಿ ಜಮಾಅತ್ ಪ್ರಯತ್ನಪಡುತ್ತದೆ ಎಂದು. ಆಗ ಇನ್ನೂ ಅಧಿಕ ಸವಲತ್ತಿನಿಂದ ಮತ್ತು ಸ್ವತಂತ್ರ ರೀತಿಯಲ್ಲಿ ಕಾರ್ಯಕ್ರಮಗಳನ್ನು ನಡೆಸಬಹುದಾಗಿದೆ. ಆದರೆ ಗೇಗೂ ಅಲ್ಲಾಹನು ಜಾಗ ಒದಗಿಸಿಕೊಟ್ಟಿದ್ದಾನೆ. ತುಂಬಾ ವಿಶಾಲವಾದ ಕ್ಷೇತ್ರವಿದೆ. ಕ್ಷೇತ್ರವು ವಿಶಾಲವಾಗಿದ್ದರಿಂದ ಕರ್ತವ್ಯಪಾಲಕರ ಜವಾಬ್ದಾರಿಯು ಹೆಚ್ಚುತ್ತದೆ. ವಿಶೇಷವಾಗಿ ರಕ್ಷಣಾ ಸಿಬ್ಬಂದಿ ಅವರಿಗೆ ಇಷ್ಟೊಂದು ವಿಶಾಲ ಕ್ಷೇತ್ರ ನೋಡಿಕೊಳ್ಳಬೇಕು ಎಂದರೆ ಕಷ್ಟಸಾಧ್ಯವಾಗುತ್ತದೆ. ಜಾಗ್ರತೆವಹಿಸಬೇಕಾಗುತ್ತದೆ. ಇತ್ತೀಚೆಗೆ ಮುಸ್ಲಿಮರ ಬಗ್ಗೆ ಜನರ ಭಾವನೆಗಳು ಸರಿಯಿಲ್ಲ. ಆ ನೆಲೆಯಲ್ಲೂ ಸಮಸ್ಯೆಯಾಗಬಹುದು. ಇಲ್ಲಿ ಇರುವ ಮುಸ್ಲಿಮರು ನಮ್ಮ ಜಮಾಅತಿಗೆ ವಿರೋಧವಿದೆಯಾದರೂ ಅವರಿಂದಲೂ ಸಮಸ್ಯೆ ಬರಬಹುದು. ಆದ್ದರಿಂದ ರಕ್ಷಣೆ ಕಾರ್ಯ ಮಾಡುವವರು ತುಂಬಾ ಜಾಗರೂಕತೆಯಿಂದ ಕೆಲಸ ನಿರ್ವಹಿಸಬೇಕಾಗಿದೆ.

**(ಮುಂದುವರಿಯುವುದು)**

***(ಪುಟ ಸಂಖ್ಯೆ 01ರ ಉಳಿದ ಭಾಗ)***

ತರುತ್ತಾರೆ. ಪ್ರವಾದಿಗಳ ಹೊಗಳಿಕೆಯ ವಿರುದ್ಧ ಮಾತನಾಡುವುದು ನನ್ನ ಅಭಿಪ್ರಾಯದಲ್ಲಿ ಧರ್ಮನಿಂದನೆಯಾಗಿದೆ ಮತ್ತು ಇದು ನನ್ನ ನಿಲುವಾಗಿದೆ.

ಆದ್ದರಿಂದ, ಒಬ್ಬ ವ್ಯಕ್ತಿಯು ನೈತಿಕತೆಯನ್ನು ಗಳಿಸುವುದು ಮತ್ತು ಧರ್ಮನಿಷ್ಠೆಯನ್ನು ಪಡೆಯುವುದು ದೊಡ್ಡ ವಿಷಯವಾಗಿದೆ. ಅದಕ್ಕೆ ಸಜ್ಜನರ ಒಡನಾಟ ಅವಶ್ಯವಾಗಿರಬೇಕು, ಹಾಗಾಗಿ ನನ್ನೊಂದಿಗೆ ಇರಲು ಚಿಂತಿಸಿರಿ.

**(ಮಲ್‌ಫೂಝಾತ್, ಸಂಪುಟ–2, ಪುಟ–38, ಆವೃತ್ತಿ 2018, ಖಾದಿಯಾನ್)**

--------------*****--------------

**ಸೂಚನೆ::** ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಪ್ರತಿ ಶುಕ್ರವಾರ ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **ಖುತ್‌ಬ ಜುಮುಅ**ವನ್ನು ನೀಡುತ್ತಾರೆ. ಅದರ ನೇರ ಪ್ರಸಾರ MTA ಮುಖಾಂತರ ವೀಕ್ಷಿಸಲು ವಿನಂತಿಸಿಕೊಳ್ಳುತ್ತೇವೆ

**MUSLIM TELEVISION AHMADIYYA INTERNATIONAL**

**www.mta.tv**

## ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ವಾರಪತ್ರಿಕೆ "ಬದರ್" ಇದೀಗ ಕನ್ನಡದಲ್ಲಿ ಪ್ರಕಟಗೊಳ್ಳುತ್ತಿದೆ.

ಈ ಪತ್ರಿಕೆಯ ಹೆಸರು **"ಬದರ್"** ಎಂದಾಗಿದೆ. ಪೂರ್ಣ ಚಂದ್ರ ಎಂದರ್ಥ. ಇದು ಜಮಾಅತೆ ಅಹ್ಮದಿಯದ ಒಂದು ಧಾರ್ಮಿಕ ಪತ್ರಿಕೆ ಆಗಿದೆ ಅದರ ಮೂಲ ಉದ್ದೇಶ ಜಮಾಅತ್ತಿನ ಸದಸ್ಯರ ತರಬೇತಿ, ಶಿಕ್ಷಣ, ಒಳ್ಳೆ ನೈತಿಕತೆ ಕಲಿಸುವುದಾಗಿದೆ.

ನಮ್ಮ ಎರಡು ಉದ್ದೇಶಗಳಿವೆ. ಒಂದು ಅಲ್ಲಾಹನ ಹಕ್ಕನ್ನು ನಿಭಾಯಿಸುವುದು ಇನ್ನೊಂದು ದಾಸರ ಹಕ್ಕನ್ನು ಈಡೇರಿಸುವುದಾಗಿದೆ.

ಅಲ್ಲಾಹನ ಹಕ್ಕು ಏನಾಗಿದೆ ಎಂದರೆ ಅವನನ್ನು ಆರಾಧಿಸುವುದು ಅವನು ಎಲ್ಲಾ ಸ್ತುತಿ ಸರ್ವ ಲೋಕಗಳ ಪರಿಪಾಲಕನಾಗಿದ್ದಾನೆ ಮತ್ತು ಅವನ ಉಪಕಾರಗಳನ್ನು ನೆನಪಿಸಿಕೊಂಡು ಅವನಿಗೆ ವಿಧೇಯತೆ ತೋರಿಸುವುದಾಗಿದೆ.

ಇನ್ನೊಂದು ದಾಸರ ಹಕ್ಕನ್ನು ಈಡೇರಿಸುವುದಾಗಿದೆ. ದಾಸರ ಹಕ್ಕುಗಳೇನಂದರೆ ಅಗತ್ಯವುಳ್ಳವರನ್ನು ಸಹಾಯ ಮಾಡುವುದು, ಯಾರನ್ನು ದುಃಖ, ತೊಂದರೆ ಅಥವಾ ಸಂಕಷ್ಟ ಕೊಡಬಾರದು, ರಾಷ್ಟ್ರದಲ್ಲಿ ಕಿಡಿಗೇಡಿತನ ಹುಟ್ಟಿಸಬಾರದು, ಸ್ವದೇಶ ಪ್ರೇಮ ಈಮಾನಿನ ಒಂದು ಭಾಗವಾಗಿದೆ ಹಾಗೂ ಸ್ವದೇಶದ ಅಭಿವೃದ್ಧಿಗಾಗಿ ಶ್ರಮವಹಿಸುವುದಾಗಿದೆ.

ಈ ಪತ್ರಿಕೆಯು 100 ವರ್ಷಕ್ಕಿಂತ ಹೆಚ್ಚು ಕಾಲಾವಧಿಯಿಂದ ಈ ಉದ್ದೇಶದ ಪ್ರಕಾರ ಜಮಾಅತ್ತಿನ ಸದಸ್ಯರ ಶೈಕ್ಷಣಿಕವಾಗಿ ತರಬೇತಿ ಮಾಡುತ್ತಾ ಬಂದಿದೆ. ಅದರ ಪ್ರತಿ ಫಲವಾಗಿ ನಮಗೆ ಅಲ್ಲಾಹನ ಅನುಗ್ರಹದಿಂದ ಶಾಂತಿಯುತ ಪಂಗಡ ಎಂದು ವಿಶ್ವದಾದ್ಯಂತ ಪರಿಗಣಿಸುತ್ತಾರೆ.

ಅಕ್ಟೋಬರ್ 1902ರಲ್ಲಿ ಜಾಗತಿಕ ಅಹ್ಮದಿಯ ಮಯಸ್ಲಿಮ್ ಜಮಾಅತ್ತಿನ ಸಂಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ(ಅಲೈಹಿಸ್ಸಲಾಮ್) ಅವರು ಈ ಪತರಿಕೆಯನ್ನು ಉರ್ದು ಭಾಷೆಯಲ್ಲಿ ಉದ್ಘಾಟಿಸಿದರು. ಇಂದು ಈ ಪತ್ರಿಕೆಯು ಭಾರತದ ಏಳು ಭಾಷೆಗಳಲ್ಲಿ ಭಾಷಾಂತರವಾಗಿ ಪ್ರಕಟಗೊಳ್ಳುತ್ತಿದೆ. ಉರ್ದುವನ್ನು ಬಿಟ್ಟು ಹಿಂದಿ, ತಮಿಳು, ತೆಲುಗು, ಬಾಂಗ್ಲ, ಒಡಿಯಾ, ಮಳಯಾಳಂ ಹಾಗೂ ಕನ್ನಡ. ಕಳೆದ 5 ವರ್ಷದಿಂದ ಕನ್ನಡದಲ್ಲಿಯು ಈ ಪತ್ರಿಕೆಯು ಪ್ರಕಟಗೊಳ್ಳುತ್ತಿರುವುದು ಬಹಳ ಸಂತೋಷದ ವಿಷಯವಾಗಿದೆ. ಈ ಪತ್ರಿಕೆಯು ಧಾರ್ಮಿಕ ಪತ್ರಿಕೆ ಆದ್ದರಿಂದ ರಾಜಕೀಯ ನಿಟ್ಟಿನಲ್ಲಿ ಯಾವ ಸಂಬಂಧವೂ ಇಲ್ಲ.

ಈ ಪತ್ರಿಕೆಯಲ್ಲಿ ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್‌ರವರ ಶುಕ್ರವಾರದ ಪ್ರವಚನ (ಖುತ್‌ಬ ಜುಮುಅ) ವಿಶೇಶವಾಗಿರುತ್ತದೆ. ಆ ಖುತ್‌ಬದಲ್ಲಿ ಅವರು ಪವಿತ್ರ ಖುರ್‌ಆನ್ ಹಾಗೂ ಹದೀಸ್‌ಗಳ ಶಿಕ್ಷಣಗಳ ಪ್ರಕಾರ ತಮ್ಮ ಜಮಾಅತ್ತಿನ ಸದಸ್ಯರನ್ನು ಸಂಬೋಧಿಸುತ್ತಾರೆ. ನಿಮ್ಮ ಈ ಪ್ರವಚನವೂ ಎಂ.ಟಿ.ಎ ಎಂಬ ಚ್ಯಾನಲ್‌ನಲ್ಲಿ ಪ್ರತಿ ಶುಕ್ರವಾರ ನೇರವಾಗಿ ಪ್ರಸಾರವಾಗುತ್ತದೆ. ಅದನ್ನು ಇಡೀ ವಿಶ್ವದಾದ್ಯಂತ ಕೇಳ ಹಾಗೂ ನೋಡಬಹುದು. ತದನಂತರ ಈ ಖುತ್‌ಬ ಪತ್ರಿಕೆಯಲ್ಲಿ ಪಕಟಗೊಳ್ಳುತ್ತದೆ. ಖಲೀಫರ ಖುತ್‌ಬ ಈ ಪತ್ರಿಕೆಯ ಪ್ರಾಣವಾಗಿದೆ.

ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ವಾಗ್ದಾತ್ತ ಮಹೀಹರ 5ನೇ ಖಲೀಫರಾಗಿದ್ದಾರೆ ಅವರು ಲಂಡನ್‌ನಲ್ಲಿ ವಾಸವಾಗಿದ್ದಾರೆ. ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಇಮಾಮರಾಗಿದ್ದಾರೆ. ಅದಲ್ಲದೆ ಈ ಪತ್ರಿಕೆಯಲ್ಲಿ ಖಲೀಫರ ಪ್ರವಾಸಗಳ ವರದಿಗಳು ಪ್ರಕಟಗೊಳ್ಳುತ್ತದೆ ಅವೂ ಬಹಳ ಕುತೂಹಲಕಾರಿ ಆಗಿರುತ್ತದೆ. ಈ ವರದಿಗಳು ಜಮಾಅತ್ತಿನ ಸದಸ್ಯರ ಜ್ಞಾನ ಅಭಿವೃದ್ಧಿಯಲ್ಲಿ ವಿಶೇಶವಾಗಿ ಕಾರ್ಯ ನಿರ್ವಹಿಸುತ್ತದೆ. ಇದಲ್ಲದೆ ಜಮಾಅತ್ತಿನ ಕಾರ್ಯಗಳ ವರದಿಗಳು ಮತ್ತು ಆಧ್ಯಾತ್ಮಿಕ ಹಾಗೂ ಶೈಕ್ಷಣಿಕ ಅಭಿವೃದ್ಧಿಸುವಂತಹ ಜ್ಞಾನ ಭರಿತ ಲೇಖನಗಳು ಪ್ರಕಟಗೊಳ್ಳುತ್ತದೆ.

ಹೀಗಾಗಿ ಈ ಪತ್ರಿಕೆಯು ಮಹತ್ವಪೂರ್ಣವಾದ ಪತ್ರಿಕೆ ಆಗಿದೆ.

ಎಲ್ಲಾ ಓದುಗರಲ್ಲಿ ಈ ಪತ್ರಿಕೆಯನ್ನು ಕೊಂಡುಕೊಳ್ಳಬೇಕಾಗಿ ವಿನಂತಿಸಲಾಗುತ್ತಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: +91 99153 79255, 9902678609, 9760468663 (ವ್ಯವಸ್ಥಾಪಕರು)

**"ಮೇಲಿನ ಕೈ ಕೆಳಗಿನ ಕೈಗಿಂತ ಉತ್ತಮವಾಗಿದೆ. (ಎಂದರೆ ಧಾನಧರ್ಮ ಕೊಡುವವನು ಅದನ್ನು ಪಡೆದುಕೊಳ್ಳುವವನಿಗಿಂತ ಉತ್ತಮವಾಗಿದ್ದಾನೆ)"**

(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**

**M.B. Nasir Ahmed & Family, Bengaluru, Karnataka**

**ಇನ್ಸಾನಿಯತ್ ಝಿಂದಾಬಾದ್, ಮಾನವೀಯತೆ ಚಿರಕಾಲ ಬಾಳಲಿ**

## ಜಲ್ಸ ಸಾಲಾನ ಖಾದಿಯಾನ್

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: **"**ಈ ಜಲ್ಸದೊಂದಿಗೆ ಅನೇಕ ಅನುಗ್ರಹಗಳು ಅನಿವಾರ್ಯವಾಗಿ ಸೇರಿಕೊಂಡಿರುವುದರಿಂದ ದಾರಿ ಖರ್ಚಿಗೆ ಸಾಮರ್ಥ್ಯವಿರುವ ಪ್ರತಿಯೊಬ್ಬನು ಈ ಜಲ್ಸಕ್ಕೆ ಆಗಮಿಸಬೇಕು. ಚಳಿಗಾಲಕ್ಕೆ ಆವಶ್ಯಕವಾದ ಹಾಸುವ ಮತ್ತು ಹೊದಿಕೆ ಬಟ್ಟೆಗಳನ್ನು ಆವಶ್ಯಕವಾದಷ್ಟು ತರಬೇಕು. ಅಲ್ಲಾಹನ ಮತ್ತು ಅವನ ರಸೂಲರ ಮಾರ್ಗದಲ್ಲಿ ಚಿಕ್ಕಪುಟ್ಟ ಅಡ್ಡಿ ಆತಂಕಗಳನ್ನು ನಿರ್ಲಕ್ಷಿಸಬೇಕು. ಅಲ್ಲಾಹನು ನಿಷ್ಠಾವಂತನಿಗೆ ಪ್ರತಿಯೊಂದು ಹೆಜ್ಜೆಯಲ್ಲಿಯೂ ಅನುಗ್ರಹ ನೀಡುತ್ತಾನೆ. ಅವನ ಮಾರ್ಗದಲ್ಲಿ ಪಡುವ ಕಷ್ಟಗಳನ್ನು ವ್ಯರ್ಥಗೊಳಿಸುವುದಿಲ್ಲ. ನಾನು ಪುನರಾವರ್ತಿಸಿ ಬರೆಯುತ್ತೇನೆ ಈ ಜಲ್ಸವನ್ನು ಮಾನವರ ಸಾಮಾನ್ಯ ಜಲ್ಸದ ಹಾಗೆಂದು ಯೋಚಿಸಬೇಡಿರಿ. ಇದು ಸತ್ಯಕ್ಕೆ ಬೆಂಬಲ ನೀಡುವ ಮತ್ತು ಇಸ್ಲಾಮಿನ ಪ್ರಚಾರ ಮಾಡುವ ಅಸ್ತಿಭಾರವನ್ನು ಹೊಂದಿದೆ. ಈ ಜಮಾಅತಿನ ಅಸ್ತಿಭಾರವನ್ನು ಅಲ್ಲಾಹನು ತನ್ನ ಕೈಯಿಂದ ಹಾಕಿದ್ದಾನೆ. ಇದಕ್ಕೋಸ್ಕರ ಅಲ್ಲಾಹನು ಸಮುದಾಯಗಳನ್ನು ಸಿದ್ಧಪಡಿಸಿಟ್ಟಿದ್ದಾನೆ. ಅವರು ಬೇಗನೆ ಇದರಲ್ಲಿ ಬಂದು ಸೇರುವರು. ಯಾಕೆಂದರೆ ಇದು ಸರ್ವಶಕ್ತನಾದವನ ಕೆಲಸವಾಗಿದೆ. ಅವನಿಗೆ ಅಸಾಧ್ಯವಾದುದು ಏನೂ ಇಲ್ಲ.**"**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: **"**ಅಲ್ಲಾಹನಿಗೋಸ್ಕರ ಈ ಜಲ್ಸದಲ್ಲಿ ಭಾಗವಹಿಸಲು ಪ್ರಯಾಣ ಮಾಡುವ ಪ್ರತಿಯೊಬ್ಬನ ಜೊತೆಗೆ ಅಲ್ಲಾಹನು ಜೊತೆಗಾರನಾಗಿರಲಿ. ಅವನಿಗೆ ಬೃಹತ್ತಾದ ಪ್ರತಿಫಲ ನೀಡಲಿ. ಅವರೆಲ್ಲರಿಗೆ ಕಾರುಣ್ಯದೋರಲಿ. ಅವರ ಕಷ್ಟಗಳನ್ನೂ ಆತಂಕಭರಿತ ಸ್ಥಿತಿಯನ್ನೂ ನಿವಾರಿಸಿ ಅವರಿಗೆ ಸೌಲಭ್ಯ ನೀಡುವಂತಾಗಲಿ. ಅವರ ಚಿಂತೆಗಳನ್ನೂ ದುಃಖಗಳನ್ನೂ ದೂರ ಸರಿಸಲಿ. ಅವರಿಗೆ ಪ್ರತಿಯೊಂದು ಕಷ್ಟದಿಂದ ಮುಕ್ತಿಯನ್ನು ದಯಪಾಲಿಸಲಿ. ಅವರ ಇಚ್ಛೆಗಳ ಮಾರ್ಗಗಳನ್ನು ಅವರಿಗೆ ತೆರೆದುಕೊಡಲಿ. ಆಖಿರತ್‌ನಲ್ಲಿ ಅಲ್ಲಾಹನು ಅವರನ್ನು ತಾನು ಅನುಗ್ರಹ ಮತ್ತು ಕಾರುಣ್ಯ ನೀಡಿದ ತನ್ನ ದಾಸರೊಂದಿಗೆ ಎದ್ದೇಳಿಸಲಿ. ಅವರ ಪ್ರಯಾಣದ ಅಂತ್ಯದ ವರೆಗೂ ಅವರ ಬದಲು ಅವರ ಪ್ರತಿನಿಧಿಯಾಗಿರಲಿ. ಓ ಅಲ್ಲಾಹ್, ಕೀರ್ತಿಶಾಲಿಯೂ ವರದಾನ ನೀಡುವವನೂ ಕಾರುಣ್ಯಮಯನೂ ಕಷ್ಟ ಪರಿಹರಿಸುವವನೂ ಆಗಿರುವ ನೀನು ಈ ಎಲ್ಲ ಪ್ರಾರ್ಥನೆಗಳನ್ನೂ ಅಂಗೀಕರಿಸು. ನಮ್ಮ ವಿರೋಧಿಗಳ ವಿರುದ್ಧ ಪ್ರಕಾಶಮಾನವಾದ ದೃಷ್ಟಾಂತಗಳ ಮೂಲಕ ನಮಗೆ ಜಯವನ್ನು ನೀಡು. ಎಲ್ಲಾ ಶಕ್ತಿಸಾಮರ್ಥ್ಯಗಳು ನಿನ್ನಲ್ಲಿ ಮಾತ್ರ ಇವೆ**"** – ಆಮೀನ್ ಸುಮ್ಮ ಆಮೀನ್. **(ಮಜ್‌ಮೂಅ ಇಶ್ತಿಹಾರಾತ್ ಸಂಪುಟ–1 ಪುಟ 341–342, ಇಶ್ತಿಹಾರ್ 1892 ಡಿಸೆಂಬರ್ ದಿನಾಂಕ 7)**

## ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ಸಾಲಾನ ಇಜ್ತೆಮಾ 2024 ನಡೆಯುವ ದಿನಾಂಕಗಳು

ಸಯ್ಯಿದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 25, 26 ಮತ್ತು 27ನೇ ಅಕ್ಟೋಬರ್ 2024 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

**"ಯಾರು ಜನರಿಗೆ ಕೃತಜ್ಞತೆ ಸಲ್ಲಿಸುವುದಿಲ್ಲವೋ ಅವನು ಅಲ್ಲಾಹನಿಗೂ ಕೃತಜ್ಞತೆ ಸಲ್ಲಿಸುವುದಿಲ್ಲ."**

(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**

**Mubarak Ahmed Naseem & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2023-25 Vol No.05, Thursday, 10 October 2024, Issue No. 41

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

# ಸೈಯಿದುನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಅ)ರವರ ಜರ್ಮನಿಯ ಪ್ರವಾಸ ಆಗಸ್ಟ್, ಸೆಪ್ಟೆಂಬರ್ 2023

*(ಬದರ್ ಸಂಚಿಕೆ-40ರ ಉಳಿದ ಭಾಗ ಮುಂದುವರಿಸಲಾಗಿದೆ)*

**31 ಆಗಸ್ಟ್ 2023 ಗುರುವಾರ**

ಹುಝೂರ್ ಅನ್ವರ್(ಅತಬಅ) ಮುಂಜಾನೆ 5.40 ಗಂಟೆಗೆ ಆಗಮಿಸಿ ಫಜರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ತಮ್ಮ ವಸತಿಯತ್ತ ತೆರಳಿದರು.

ಮುಂಜಾನೆ ಹುಝೂರ್ ಅನ್ವರ್(ಅತಬಅ) ಕಚೇರಿ ಅಂಚೆಗಳು, ಪತ್ರಗಳು ಮತ್ತು ವರದಿಗಳನ್ನು ಪರಿಶೀಲಿಸಿದರು. ಇಲ್ಲಿ ಜರ್ಮನಿ ಪ್ರವಾಸದ ನಡುವೆಯೂ ಲೋಕದ ವಿವಿಧ ದೇಶಗಳಿಂದ ಕ್ರಮಬದ್ಧವಾಗಿ ಪತ್ರಗಳು ಮತ್ತು ವರದಿಗಳು ಹುಝೂರರಿಗೆ ತಲುಪುತ್ತವೆ. ಜರ್ಮನಿಯಿಂದಲೂ ನೂರಾರು ಸಂಖ್ಯೆಯಲ್ಲಿ ಪತ್ರಗಳು ಹುಝೂರ್ ಅನ್ವರ್(ಅತಬಅ)ರ ಸೇವೆಯಲ್ಲಿ ಬರುತ್ತಿವೆ. ಹುಝೂರ್ ಅನ್ವರ್(ಅತಬಅ) ಇವೆಲ್ಲ ಪತ್ರಗಳನ್ನು, ವರದಿಗಳನ್ನು ಮತ್ತು ಅಂಚೆಯನ್ನು ಸ್ವತ: ತಾವೇ ಪರಿಶೀಲಿಸಿ ಟಿಪ್ಪಣಿಗಳನ್ನು ಬರೆಯುತ್ತಾರೆ. ಇದು ದಿನನಿತ್ಯ ನಡೆಯುವ ಕಾರ್ಯವಾಗಿದೆ.

2 ಗಂಟೆಗೆ ಹುಝೂರ್ ಅನ್ವರ್(ಅತಬಅ) ಆಗಮಿಸಿ ಝುಹರ್ ಮತ್ತು ಅಸರ್ ನಮಾಝ್ ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ಅನ್ವರ್(ಅತಬಅ) ತಮ್ಮ ವಸತಿನಿಲಯಕ್ಕೆ ತೆರಳಿದರು.

ಇಂದು ಕಾರ್ಯಕ್ರಮದನ್ವಯ Stuttgart ಸಮಾರಂಭ ಸ್ಥಳಕ್ಕೆ ಹೋಗಬೇಕಾಗಿತ್ತು 5.15 ಕ್ಕೆ ಹುಝೂರ್ ಅನ್ವರ್(ಅತಬಅ) ತನ್ನ ವಸತಿ ನಿಲಯದಿಂದ ಹೊರಗೆ ಬಂದರು. ಮತ್ತು ದುಆ ಮಾಡಿದರು. ನಂತರ ಇಲ್ಲಿಂದ Stuttgart ಗೆ ಪ್ರಯಾಣ ಬೆಳೆಸಿದರು.

ಬೈತುಸ್ಸುಬೂಹ್ ಫ್ರೆಂಕ್‌ಫರ್ಟ್‌ಯಿಂದ Stuttgart ಗಿರುವ ದೂರ 220 ಕಿ.ಮೀ ಆಗಿದೆ. ಈ ಹೊಸ ಜಾಗದಲ್ಲಿ ಅಹ್ಮದಿಯಾ ಜಮಾಅತ್ ಜರ್ಮನಿಯ ವಾರ್ಷಿಕ ಸಮಾವೇಶವು ಅಹ್ಮದಿಯಾ ಜಮಾಅತ್ ಜರ್ಮನಿಯ ವಾರ್ಷಿಕ ಸಮಾವೇಶವು ನಡೆಯುತ್ತಿರುವುದು ಮೊದಲನೆಯ ಬಾರಿಯಾಗಿದೆ. ಈ ಜಲ್ಸಕ್ಕೆ ನಡೆಯುತ್ತಿರುವುದು ಮೊದಲನೆಯ ಬಾರಿಯಾಗಿದೆ. ಈ ಜಲ್ಸಕ್ಕೆ ಮಹತ್ವ ಬರಲು ಇನ್ನೊಂದು ಕಾರಣವೆಂದರೆ ಜರ್ಮನಿಯಲ್ಲಿ ಜಮಾಅತ್ ಸ್ಥಾಪನೆಗಾಗಿ 100 ವರ್ಷ ಪೂರ್ಣಗೊಂಡಿವೆ. ಇದು ಜರ್ಮನಿ ಜಮಾಅತಿನ 47ನೇ ವಾರ್ಷಿಕ ಸಮ್ಮೇಳನವಾಗಿದೆ.

ಜಲ್ಸ ಸಾಲಾನ ಜರ್ಮನಿಯ ಪ್ರಾರಂಭ 1975 ರಂದು ಮಸ್ಜಿದ್ ಫಝುಲ್ ಹೆಂಬರ್ಗ್‌ನಲ್ಲಾಯಿತು ಅಲ್ಲಿ ಸುಮಾರು 70 ಜನರು ಭಾಗವಹಿಸಿದ್ದರು. ಅನಂತರ ಅಲ್ಲಾಹನ ಅನುಗ್ರಹದಿಂದ ಬರುವ ಪ್ರತಿಯೊಂದು ಜಲ್ಸ ಇನ್ನಷ್ಟು ಅನುಗ್ರಹಗಳಿಗೆ ಪಾತ್ರವಾಯಿತು. ಮತ್ತು ಭಾಗಿಯಾಗುವವರ ಸಂಖ್ಯೆ ಹೆಚ್ಚುತ್ತಲೇ ಹೋಯಿತು. ಇಲ್ಲಿಯವರೆಗೆ ವಾರ್ಷಿಕ ಸಮ್ಮೇಳನಗಳು ನಾಸಿರ್ ಬ್ಬಾಗ್ (Gross Gerau) ನಲ್ಲಿ ನಡೆಯುತ್ತಿದ್ದವು. ಈ ಸ್ಥಳವು ಸಾಕಾಗಲಿಲ್ಲ. ಮತ್ತೆ ಫ್ರೆಂಕ್‌ಫರ್ಟ್‌ನಿಂದ 92 ಕಿಮೀ ದೂರವಿರುವ Mannheim ನಲ್ಲಿ ವಾರ್ಷಿಕ ಸಮ್ಮೇಳನಗಳನ್ನು ಆಯೋಜಿಸತೊಡಗಿದರು. ವರ್ಷಾವಾರು 2010 ರವರೆಗೆ ಇಲ್ಲಿಯೇ ವಾರ್ಷಿಕ ಸಮ್ಮೇಳಗಳು ನಡೆದವು. ಅಲ್ಲಾಹನ ಅನುಗ್ರಹದಿಂದ ಜಮಾಅತಿನ ಸಂಖ್ಯೆ ಎಷ್ಟು ವೇಗವಾಗಿ ಬೆಳೆಯಿತೆಂದರೆ ಇಂತಹ ವಿಶಾಲವಾದ ಜಾಗವು ಸಾಕಾಗಲಿಲ್ಲ ಎಂಬುದಾಯಿತು. 2011 ರಿಂದ ಫ್ರೆಂಕ್‌ಫರ್ಟ್‌ನಿಂದ 160 ಕಿ.ಮೀ ದುರದ ನಗರ Karisouhe ನಲ್ಲಿ ವಾರ್ಷಿಕ ಸಮ್ಮೇಳನ ನಡೆಸತೊಡಗಿದರು. ಈ ಸ್ಥಳ K.messe ಎನ್ನಲಾಗುತ್ತದೆ. ಅದರ ವಿಶಾಲತೆಯನ್ನು ಅಂದಾಜಿಸಬೇಕಾದರೆ ಅದರ ಒಟ್ಟು ವಿಸ್ತೀರ್ಣ ಒಂದು ಲಕ್ಷ 50 ಸಾವಿರ ಚ.ಮೀ ಆಗಿದೆ ಮತ್ತು ಅದು ಒಲಗೊಂಡ ಭಾಗ 70 ಸಾವಿರ ಚದರ ಮೀಟರ್ ಆಗಿದೆ. ಅದರಲ್ಲಿ 4 ದೊಡ್ಡ ಸಭಾಂಗಣಗಳಿದ್ದವು. ಪ್ರತಿಯೊಂದು ಸಭಾಂಗಣದ ವಿಸ್ತೀರ್ಣ 1250 ಚ.ಮೀ ಇದೆ. ಪ್ರತಿಯೊಂದು ಸಭಾಂಗಣದಲ್ಲಿ ಕುಳಿತುಕೊಳ್ಳಲು 1200 ಕುರ್ಚಿಗಳಿದ್ದವು. ಮತ್ತು 1800 ಜನರು ನಮಾಝ್ ಮಾಡಬಹುದಾಗಿತ್ತು.

2019 ನೇ ವರ್ಷದ ಕೊನೆಯ ಸಮಾವೇಶದಲ್ಲಿ ಅದು ಹುಝೂರ್ ಅನ್ವರ್(ಅತಬಅ) ಅವರ ಉಪಸ್ಥಿತಿಯಲ್ಲಿ ಆಗಿತ್ತು, 42 ಸಾವಿರಕ್ಕಿಂತ ಹೆಚ್ಚು ಜನರು ಸೇರಿದ್ದರು. ಜಲ್ಸದ ಇತರ ಎಲ್ಲಾ ವ್ಯವಸ್ಥೆಗಳಿದ್ದರೂ ಈ ಜಾಗ ಸಂಕುಚಿತವಾಯಿತು. ಆದ್ದರಿಂದ ಜರ್ಮನಿ ಜಮಾಅತ್ ಹೊಸ ಸ್ಥಳ ಹುಡುಕಲು ಪ್ರಾರಂಭಿಸಿತು. ಅಂತಿಮವಾಗಿ Messe Stutlart ನಲ್ಲಿ ಜಲ್ಸ ಏರ್ಪಡಿಸುವ ನಿರ್ಣಯ ಕೈಗೊಳ್ಳಲಾಯಿತು.

Stuttgart ನಗರ ಜರ್ಮನಿಯ Baden Wontemburg ಪ್ರಾಂತದ ರಾಜಧಾನಿಯಾಗಿದೆ. 6 ಲಕ್ಷ 30 ಸಾವಿರ ಜನಸಂಖ್ಯೆ ಒಳಗೊಂಡಿದೆ. ಇದು ಜರ್ಮನಿಯ 6ನೇ ಅತಿದೊಡ್ಡ ನಗರವಾಗಿದೆ. ಜರ್ಮನಿಯ ಸುಪ್ರಸಿದ್ಧ ಮರ್‌ಸಿಡ್ಸ್ ವಾಹನಗಳನ್ನು ತಯಾರಿಸುವ ಕಂಪನಿ ಮತ್ತು ಪೋರ್‌ಶೆಯು ಕೇಂದ್ರವಾಗಿದೆ. ಧಾರ್ಮಿಕ ನೆಲೆಯಲ್ಲಿ ನೋಡುವುದದರೆ ಕ್ರಿಸ್ತರ ಎರಡು ದೊಡಡ ಪಂಥಗಳ ರಾಜ್ಯದ ಕೇಂದ್ರವು ಆಗಿದೆ. ಆರ್ಥಿಕ ನೆಲೆಯಲ್ಲೂ ಇದು ಲೋಕದ ಅಭಿವೃದ್ಧಿಗೊಂಡ ನಗರಗಳಲ್ಲಿ ಇದನ್ನು ಗಣಿಸಲಾಗುತ್ತದೆ.

Messe suttgart 10 ಸಭಾಂಗಣಗಳನ್ನು ಒಳಗೊಂಡಿದೆ. ಅದರಲ್ಲಿ 7 ಸಭಾಂಗಣಗಳು ಹತ್ತು ಸಾವಿರ ಐದು ನೂರು ಚ. ಮೀ ಹೊಂದಿವೆ. ಅದೇ ರೀತಿಯಲಿಲ ಒಂದು Multi Funcitonal Hall 26800 ಚ. ಮೀ ವಿಸ್ತೀರ್ಣದ್ದಾಗಿದೆ. ಇದು ಅಲ್ಲಿಯ ಅತಿ ದೊಡ್ಡ ಸಭಾಂಗಣವಾಗಿದೆ.

ಸಭಾಂಗಣ ಸಂಖ್ಯೆ ಹತ್ತರ ವಿಸ್ತೀರ್ಣ 14600 ಚ.ಮೀ ಮತ್ತು ಇನ್ನೊಂದು ಸಭಾಂಗಣ International congress center ಸುಮಾರು 4900ಚ.ಮೀ ಒಳಗೊಂಡಿದೆ. ಹೀಗೆ ಈ ವರ್ಷ ಆಯೋಜಿಸಲಾಗುವ ವಾರ್ಷಿಕ ಸಮ್ಮೇಳನ ಸುಮಾರು ಒಂದು ಲಕ್ಷ 20 ಸಾವಿರ ಚ.ಮೀ ಒಳಗೊಂಡಿದೆ. ಅದೇ ರೀತಿ ಸ್ವತಂತ್ರವಾಗಿ ತಿರುಗಾಡುವ ಸ್ಥಳವೂ 3500 ಚ. ಮೀನಷ್ಟಿದೆ. ಹೀಗೆ ಈ ಸ್ಥಳ ತನ್ನ ವಿಸ್ತೀರ್ಣದ ಪ್ರಯುಕ್ತ ಜರ್ಮನಿಯ 8ನೇ ದೊಡ್ಡ ಜಾಗವಾಗಿದೆ.

ಸಭಾಂಗಣಗಳ ನಡುವೆ ಒಂದು ಸುಂದರವಾದ Atorium ಸಹ ಇದೆ. ಅದರ ಹರಡುವಿಕೆ ಒಂದು ಸಾವಿರ ಹದಿನೈದು ಚ.ಮೀ ಆಗಿದೆ. ಅಲ್ಲಿಂದ ಬೀಳುವ ಜಲಪಾದ ರೀತಿಯ ನೀರು ಮನಮೋಹಕ ದೃಶ್ಯವಾಗಿದೆ ಎಲ್ಲಾ ಸಭಾಂಗಣಗಳ ಉತ್ತರ ದಕ್ಷಿಣ ಭಾಗಗಳಲ್ಲಿ ತಿಭಿ (ಶೌಚಾಲಯ) ಕಟ್ಟಲಾಗಿದೆ. ಅದರ ಸಂಖ್ಯೆ ಸುಮಾರು 400 ಆಗಿವೆ. ಇಲ್ಲಿ ಸಾಮೂಹಿಕವಾಗಿ ಹತ್ತು ಸಾವಿರ ವಾಹನಗಳನ್ನು ನಿಲ್ಲಿಸಬಹುದಾಗಿದೆ.

ನಗರದ Internatioinal Air Port ಇಲ್ಲಿಂದ ಜಲ್ಸ ಸ್ಥಳ 10 ನಿಮಿಷದಲ್ಲಿ ಕಾಲ್ನಡಿಗೆಯಿಂದ ಹೋಗುವಷ್ಟು ದೂರದಲ್ಲಿದೆ. ಹಲವು ಪ್ರಯಾಣಿಕರು ಕಾಲ್ನಡಿಗೆಯಲ್ಲೇ ಜಲ್ಸಕ್ಕೆ ಬರುತ್ತಾರೆ. ಒಂದು ಅಂದಾಜಿನ ಪ್ರಕಾರ ದಿನಾಲೂ ಹತ್ತು ಸಾವಿರ ಪ್ರಯಾಣಿಕರು ಈ ವಿಮಾನ ನಿಲ್ದಾಣದಿಂದ ಪ್ರಯಾಣ ಮಾಡುತ್ತಾರೆ.

ಜಲ್ಸ ಸ್ಥಳದ ಸಮೀಪದಲ್ಲೇ ಸ್ಥಳೀಯ ಜಮಾಅತುಗಳು ಸಹ ಇವೆ. Stattgart ಜಮಾಅತ್ ಅಲ್ಲದೇ Filderstud ಜಮಾಅತ್, Esslingen ಜಮಾಅತ್ 15 ರಿಂದ 20 ಕಿ.ಮೀ ನಷ್ಟು ದುರದಲ್ಲಿವೆ. ಅದೇ ರೀತಿಯಲ್ಲಿ Waiblingen ಜಮಾಅತ್, Rettingen ಜಮಾಅತ್

*(ಪುಟ ಸಂಖೆ 09 ರಲ್ಲಿ ಮುಂದುವರಿಸಲಾಗಿದೆ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.